

# ಅಭ್ಯಾಸ ಮಾರ್ಗದರ್ಶಿ:
# **ಕಾರ್ಯಸಮರ್ಥ ಐಎಫ್ಎಸ್ಪಿ(IFSP) ಫಲಿತಾಂಶಗಳ ಅಭಿವೃದ್ಧಿ


WASHINGTON STATE
Department of
Children, Youth, and Families
ವಾಷಿಂಗ್ಟನ್ ಸ್ಟೇಟ್, ಮಕ್ಕಳು, ಯುವಜನರು ಮತ್ತು ಕುಟುಂಬಗಳ ವಿಭಾಗ


DEVELOPIN PRACTICE GUIDE: DEVELOPING FUNCTIONAL IFSP OUTCOMES

WASHINGTON STATE
Department of
Children, Youth, and Families

PRACTICE GUIDE:

## ವಿಷಯಸೂಚಿ/ಪರಿವಿಡಿ

ಸ್ಥೂಲ ಸಮೀಕ್ಷೆ
*ವ್ಯ-ಕು-ಸೇ*  ಪ್ರಕ್ರಿಯೆ
ಕುಟುಂಬಗಳಿಂದ ಮಾಹಿತಿ ಸಂಗ್ರಹ
ಮಗುವಿನ ಕಾರ್ಯತ್ಮಕ ಮೌಲ್ಯಮಾಪನ
ಕಾರ್ಯತ್ಮಕ ಐಎಫ್ಎಸ್ಪಿ ಫಲಿತಾಂಶ
ಫಲಿತಾಂಶಗಳ ಅಭಿವೃದ್ಧಿ
ಐಎಫ್ಎಸ್ಪಿ ಯನ್ನು ಪೂರ್ಣಗೊಳಿಸುವುದು
ಕಾರ್ಯಕಾರಿ ಐಎಫ್ಎಸ್ಪಿ ಫಲಿತಾಂಶಗಳನ್ನು ಸಾಧಿಸಲು  ಸೇವೆಗಳು
ಸಂಪನ್ಮೂಲಗಳು
ಲಗತ್ತು ಎ-ಉತ್ತಮ ಗುಣಮಟ್ಟದ, ಕಾರ್ಯಕಾರಿ ಫಲಿತಾಂಶದ ಘಟಕಗಳು
ಲಗತ್ತು ಬಿ- ಐಎಫ್ಎಸ್ಪಿ ಫಲಿತಾಂಶದ ಪುನರ್ವಿಮರ್ಶೆ
ಲಗತ್ತು ಸಿ: ಮಕ್ಕಳು ಮತ್ತು ಕುಟುಂಬದ ಕ್ರಿಯಾತ್ಮಕ ಐಎಫ್ಎಸ್ಪಿ ಫಲಿತಾಂಶಗಳು

ಸ್ಥೂಲ ಸಮೀಕ್ಷೆ

ಆರಂಭಿಕ ಹಂತದ ಸೇವೆಗಳ ಮಧ್ಯಪ್ರವೇಶ ಮಕ್ಕಳು ಮತ್ತು ಕುಟುಂಬಕ್ಕೆ ಸಂಬಂಧಿಸಿದ ಫಲಿತಾಂಶಗಳ ಹಿಂದಿರುವ ಪ್ರೇರಕ ಶಕ್ತಿಯಾಗಿದೆ. ಯಾವ ವಿಧದ ಸೇವೆಗಳನ್ನು ನೀಡಬೇಕು, ಎಷ್ಟು ಬಾರಿ ನೀಡಬೇಕು ಹಾಗೂ ಕುಟುಂಬಕ್ಕೆ ಈ ಸೇವೆಗಳನ್ನು ಯಾರು ಪೂರೈಸುತ್ತಾರೆ ಎಂಬುದನ್ನು ಕೇಂದ್ರದಲ್ಲಿ ಕುಟುಂಬದೊಂದಿಗೆ ಸಂಪರ್ಕದೊಂದಿಗಿರುವ ತಂಡವು ಈಗಾಗಲೇ ನಿಗದಿಪಡಿಸಿದ ಮಾನದಂಡಗಳ  ಅನುಸಾರ ನಿರ್ಧರಿಸುತ್ತದೆ. ಇವುಗಳು ವ್ಯಕ್ತೀಕೃತ ಕುಟುಂಬ ಸೇವಾ ಯೋಜನೆ (ವ್ಯ.ಕು.ಸೇ) ಯ ಪ್ರಮುಖ ಅಂಶವಾಗಿರುವುದರಿಂದ, ಫಲಿತಾಂಶಗಳು ಕ್ರಿಯಾತ್ಮಕ, ಭಾಗವಹಿಸುವಿಕೆ-ಆಧಾರಿತ ಮತ್ತು ಅಳೆಯಬಹುದಾದ ಕ್ರಮವಾಗಿರಬೇಕಾದುದು ನಿರ್ಣಾಯಕವಾಗುತ್ತದೆ.

ಆರಂಭಿಕ ಮಧ್ಯಪ್ರವೇಶಿಸುವಿಕೆಯ ಲಕ್ಷ್ಯ ದೈನಂದಿನ ಚಟುವಟಿಕೆಗಳಲ್ಲಿ ಯಶಸ್ವಿಯಾಗಿ ಭಾಗವಹಿಸುವಿಕೆ ಆಗಿರುತ್ತದೆ. ಆರಂಭಿಕ ಮಧ್ಯಸ್ಥಿಕೆ, ಮಕ್ಕಳ ಕಲಿಕೆ  ಮತ್ತು ವಿಕಾಸವನ್ನು ಉತ್ತಮಗೊಳಿಸಲು ಕುಟುಂಬಗಳಿಗೆ ಮತ್ತು ಆರೈಕೆದಾರರಿಗೆ ಬೆಂಬಲವನ್ನು ಒದಗಿಸುತ್ತದೆ. ಈ ಲಕ್ಷ್ಯ, ಸಾಂಪ್ರದಾಯಿಕ ಸೇವಾ ಮಾದರಿಗಳಾದ  ಚಿಕಿತ್ಸೆ/ವೈದ್ಯಕೀಯ, ಕೊರತೆ-ಆಧಾರಿತ ಅಥವಾ ಸೇವಾ-ಆಧಾರಿತ ಮಾದರಿಗಳಿಗೆ ಬದಲಾಗಿ ಫಲಿತಾಂಶಗಳ ಮೇಲೆ ಕೇಂದ್ರೀಕರಿಸುವ ನವೀನ ಮಾದರಿಗೆ ರೂಪಾಂತರಗೊಂಡಿರುವುದನ್ನು ಪ್ರತಿಬಿಂಬಿಸುತ್ತದೆ. ಈ ಹೊಸ ಮಾದರಿಗಳು ಸಾಮರ್ಥ್ಯ-ವರ್ಧನೆ, ಸಾಮರ್ಥ್ಯ-ಆಧಾರಿತ,

ಕುಟುಂಬ-ಕೇಂದ್ರಿತ ಮತ್ತು ತರಬೇತಿ ಮಾದರಿಗಳನ್ನು ಒಳಗೊಂಡಿದೆ.

ಮಕ್ಕಳು ಯಾವಾಗ ಕಲಿಯುತ್ತಾರೆ ಮತ್ತು ಯಾವಾಗ ಉತ್ತಮವಾಗಿ ಪ್ರಗತಿಹೊಂದುತ್ತಾರೆ ಎಂಬುದನ್ನು ಸಂಶೋಧನೆಗಳು ತಿಳಿಸುತ್ತವೆ ಅದರ ಪ್ರಕಾರ:

• ದಿನನಿತ್ಯದ ಕೌಟುಂಬಿಕ ಮತ್ತು ಸಾಮುದಾಯಿಕ ದಿನಚರಿ ಮತ್ತು ಚಟುವಟಿಕೆಗಳು ಒದಗಿಸುವ ಸ್ವಾಭಾವಿಕ ಕಲಿಕಾ ಅವಕಾಶಗಳಲ್ಲಿ ಭಾಗವಹಿಸುವುದರ ಮೂಲಕ; ಮತ್ತು

• ಪರಿಚಿತ ಆರೈಕೆದಾರರೊಡನೆ ಆಸಕ್ತಿಯುತ ಮತ್ತು ಒಳಗೊಳ್ಳುವಿಕೆಯ ಚಟುವಟಿಕೆಗಳು ಮತ್ತು ಅಂತರಕ್ರಿಯೆಗಳು ಮಕ್ಕಳ ಸಾಮರ್ಥ್ಯ ಮತ್ತು ಕೌಶಲ್ಯಗಳ ಮೇಲಿನ ಪ್ರಭುತ್ವನ್ನು ಬಲಪಡಿಸುತ್ತವೆ ಮತ್ತು ಉತ್ತೇಜಿಸುತ್ತವೆ.

(ಡನ್ಸ್ಟ್, ಬ್ರೂಡರ್, ಟ್ರಿವೆಟ್ಟೆ, ರಾಬ್ & ಮೆಕ್ಲೀನ್, 2001; ಶೆಲ್ಡೆನ್ & ರಶ್, 2001)

ಹೊಸ ಕೌಶಲ್ಯಗಳನ್ನು ಕಲಿಯಲು ಮತ್ತು ಅಭ್ಯಸಿಸಲು ಆರೈಕೆದಾರರು ದಿನವಿಡೀ ಬಹುವಿಧಧ ಅವಕಾಶಗಳು ಮತ್ತು ಅಗತ್ಯ ಬೆಂಬಲವನ್ನು ಒದಗಿಸುತ್ತಾರೆ (ಮ್ಯಾಕ್‌ವಿಲಿಯಮ್). ಮಗುವಿನೊಂದಿಗೆ ಅವರ ಸಂಬಂಧದ ಪರಿಧಿಯೊಳಗೆ ಒದಗಬಹುದಾದ ದೈನಂದಿನ ಕಲಿಕೆಯ ಅವಕಾಶಗಳಲ್ಲಿ ವಿಕಾಸವನ್ನು ಹೆಚ್ಚಿಸುವ ಸಂಪನ್ಮೂಲಗಳು ಮತ್ತು ಚಟುವಟಿಕೆಗಳನ್ನು ಸೂಚಿಸುವ ಮೂಲಕ ಸೇವಾ ಪೂರೈಕೆದಾರರು ಆರೈಕೆದಾರರನ್ನು ಬೆಂಬಲಿಸುತ್ತಾರೆ. ಸಂಬಂಧದ ಈ ಮೊದಲ ಹೆಜ್ಜೆ(ಅಂದರೆ, ಆರೈಕೆ ಮಾಡುವವರು ಮತ್ತು ಮಗುವಿನ ನಡುವಿನ ಸಂಬಂಧ) ವಿಕಾಸ ಹೊಂದಬಹುದಾದ ಎಲ್ಲಾ ಕ್ಷೇತ್ರಗಳಲ್ಲಿ ಬೆಳವಣಿಗೆಗೆ ಅಡಿಪಾಯವಾಗಿದೆ.

ತಂಡವು ಒಟ್ಟುಮಾಡುವ ಮಾಹಿತಿ ಸಂಗ್ರಹಣೆಯನ್ನು ಆಧರಿಸಿದ ಫಲಿತಾಂಶಗಳಲ್ಲಿ *ವ್ಯ-ಕು-ಸೇ* (IFSP) ಯ ಸಾರವು ಅಡಗಿದೆ. ಉತ್ತಮ-ಗುಣಮಟ್ಟದ ಫಲಿತಾಂಶಗಳು ಆರಂಭಿಕ ಮಧ್ಯಸ್ಥಿಕೆಯಲ್ಲಿ ಎಲ್ಲಾ ಕ್ರಿಯೆಗಳಿಗೆ ಪರಸ್ಪರ ಮಾರ್ಗದರ್ಶನ ನೀಡುವ ಮೂಲಕ ಮಗು ಮತ್ತು ಕುಟುಂಬಕ್ಕೆ ಪ್ರಗತಿ ಮತ್ತು ಯಶಸ್ಸು ದೊರಕುವ ಸಾಧ್ಯತೆಯನ್ನು ಹೆಚ್ಚಿಸುತ್ತವೆ.

*ವ್ಯ-ಕು-ಸೇ* ಪ್ರಕ್ರಿಯೆ

ಅರ್ಹ ಮಕ್ಕಳು ಮತ್ತು ಅವರ ಕುಟುಂಬಗಳಿಗೆ ಉಪಯುಕ್ತವಾಗಬಲ್ಲ/ಕ್ರಿಯಾತ್ಮಕ ಐಎಫ್‌ಎಸ್‌ಪಿ ಫಲಿತಾಂಶಗಳನ್ನು ಅಭಿವೃದ್ಧಿಪಡಿಸುವುದು *ವ್ಯ-ಕು-ಸೇ ಪ್ರ*ಕ್ರಿಯೆಯ ಗುರಿಯಾಗಿದೆ. *ವ್ಯ-ಕು-ಸೇ* ಪ್ರಕ್ರಿಯೆಯಲ್ಲಿನ ಹಂತಗಳು ಪ್ರಗತಿಹೊಂದುತ್ತಾ ಹೋಗುತ್ತವೆ ಮತ್ತು ಅವು ಪರಸ್ಪರ ಸಂಬಂಧ ಹೊಂದಿವೆ. ಆರಂಭಿಕ ಹಂತಗಳಲ್ಲಿ ಸಂಗ್ರಹಿಸಿದ್ದು ಮತ್ತು ಬಳಸಿದ್ದನ್ನು ನಂತರದ ಹಂತಗಳಲ್ಲಿ ಬಳಸಿಕೊಂಡು ಮುಂದಿನ ಹಂತಗಳನ್ನು ರೂಪಿಸಲಾಗುತ್ತದೆ. ಮಾಹಿತಿಯನ್ನು ಮರುಪರಿಶೀಲಿಸಿ ಮತ್ತು ಬಲಪಡಿಸಲಾಗುತ್ತದೆ

*ವ್ಯ-ಕು-ಸೇ* (IFSP) ತಂಡವನ್ನು ನೇರವಾಗಿ *ವ್ಯ-ಕು-ಸೇ* ಕ್ರಿಯಾತ್ಮಕ ಫಲಿತಾಂಶಗಳ ಅಭಿವೃದ್ಧಿಯತ್ತ ಕೊಂಡೊಯ್ಯಬಲ್ಲ *ವ್ಯ-ಕು-ಸೇ* ಪ್ರಕ್ರಿಯೆಯ ಎರಡು ಪ್ರಮುಖ ಹಂತಗಳು:

1. ಕುಟುಂಬ-ನಿರ್ದೇಶಿತ ಮೌಲ್ಯಮಾಪನದಲ್ಲಿ ಪ್ರತಿ ಕುಟುಂಬದಿಂದ ಅವರ ಕಾಳಜಿಯ ಮತ್ತು ಆದ್ಯತೆಯ ವಿಷಯಗಳು, ಲಭ್ಯವಿರುವ ಸಂಪನ್ಮೂಲಗಳು ಮತ್ತು ಅವರ ದಿನಚರಿಗಳ ಬಗ್ಗೆ ಮಾಹಿತಿಯನ್ನು ಸಂಗ್ರಹಿಸುವುದು; ಮತ್ತು

2. ಪ್ರತಿ ಅರ್ಹ ಮಗುವಿನ ಕಾರ್ಯಕಾರಿ ಮೌಲ್ಯಮಾಪನವನ್ನು ನಡೆಸುವುದು.

ಕುಟುಂಬದ ಮಾಹಿತಿ ಮತ್ತು ಮಕ್ಕಳ ಮೌಲ್ಯಮಾಪನ ಫಲಿತಾಂಶಗಳನ್ನು ಪರಿಶೀಲಿಸುವಾಗ *ವ್ಯ-ಕು-ಸೇ* ತಂಡದ ಸದಸ್ಯರು ಈ ಕೆಳಗಿನವುಗಳನ್ನು ಪರಿಗಣಿಸಬೇಕು:

• ತನ್ನ ಜೀವನದ ವಿವಿಧ ಸನ್ನಿವೇಶಗಳು ಮತ್ತು ಚಟುವಟಿಕೆಗಳಲ್ಲಿ ಭಾಗವಹಿಸಿ ಕಾರ್ಯಕಾರಿಯಾಗಲು ಮಗುವಿಗೆ ಇರುವ ಅವನ/ಅವಳ ಸಾಮರ್ಥ್ಯದ ಬಗ್ಗೆ ತೀರ್ಮಾನಗಳು ಏನು ಸೂಚಿಸುತ್ತವೆ?

• ಮಗುವಿನ ಸುತ್ತಲಿನ ಪರಿಸರವು ಆತನ ವಿಕಾಸವನ್ನು ಎಷ್ಟರಮಟ್ಟಿಗೆ ಬೆಂಬಲಿಸುತ್ತದೆ?

• ಮಗುವಿನ ಜೀವನದ ಆಘಾತಕಾರಿ ಘಟನೆಗಳು ಅಥವಾ ಬದಲಾವಣೆಗಳು ವಿಕಾಸದ ಮುನ್ನಡೆಯನ್ನು ಹೇಗೆ ಪ್ರಭಾವಿಸಬಹುದು?

• ಮಗುವಿನ ದೈಹಿಕ ನ್ಯೂನತೆ ಅಥವಾ ವಿಕಾಸಾತ್ಮಕ ವಿಳಂಬಗಳಿಗೆ ಸಂಬಂಧಿಸಿದ ಯಾವುದಾದರೂ ಅಂಶ ಅವರ ಆರೈಕೆದಾರರು ಅಥವಾ ಗೆಳೆಯರೊಂದಿಗಿನ ಸಾಮಾಜಿಕ ಅಂತರಕ್ರಿಯೆಯ ಮೇಲೆ ಪರಿಣಾಮ ಬೀರುತ್ತಿರಬಹುದೇ ?

ಈ ಮಾಹಿತಿಯು ಮಗುವಿಗೆ ಮತ್ತು ಮಗುವಿನ ಕುಟುಂಬಕ್ಕೆ ಇಬ್ಬರಿಗೂ ಸೂಕ್ತವಾಗಿರುವ *ವ್ಯ-ಕು-ಸೇ* ಫಲಿತಾಂಶಗಳನ್ನು ಗುರುತಿಸಲು ಹೇಗೆ ಸಹಾಯ ಮಾಡುತ್ತದೆ?

## ಕುಟುಂಬದಿಂದ ಮಾಹಿತಿಯನ್ನು ಸಂಗ್ರಹಿಸುವುದು

ಕುಟುಂಬಗಳಿಂದ ಮಾಹಿತಿ ಸಂಗ್ರಹಿಸುವ ಉದ್ದೇಶ, ದೈನಂದಿನ ನಿಯತಕೆಲಸಗಳು ಮತ್ತು ಚಟುವಟಿಕೆಗಳಲ್ಲಿ (ಕಾಳಜಿಗಳು) ಯಾವುದು ಸವಾಲಾಗಿರುತ್ತದೆ ಮತ್ತು ಯಾವ ನಿತ್ಯ ಕೆಲಸಗಳು ಉತ್ತಮವಾಗಿ ಸಾಗುತ್ತದೆ ( ಮಗು ಮತ್ತು ಕುಟುಂಬದ ಸಂಪನ್ಮೂಲಗಳು, ಸಾಮರ್ಥ್ಯಗಳು, ಮತ್ತು ಆಸಕ್ತಿಗಳನ್ನು ಗುರುತಿಸುವುದು) ಎಂಬುದನ್ನು ತಿಳಿದುಕೊಳ್ಳುವುದು. ಇದು ವ್ಯಕ್ತೀಕೃತ ಕುಟುಂಬ ಸೇವಾ ತಂಡಕ್ಕೆ ಕುಟುಂಬಕ್ಕೆ ಬಹಳ ಪ್ರಸ್ತುತವಾದ ದೈನಂದಿನ ಚಟುವಟಿಗೆಗಳ ಹಿನ್ನೆಲೆಯಲ್ಲಿ ಮಗು ಮತ್ತು ಕುಟುಂಬಕ್ಕೆ ಬೆಂಬಲ ಒದಗಿಸುವ ಕಡೆ ಗಮನ ನೀಡಲು ಅನುವು ಮಾಡಿಕೊಡುತದೆ. ಕುಟುಂಬದಿಂದ ದೊರೆಯುವ ಮಾಹಿತಿಯ ಜೊತೆಗೆ, ಮಗುವಿಗೆ ಆರೈಕೆ ಮಾಡುವವರು ಅಥವಾ ಮಗುವಿನೊಂದಿಗೆ ಹೆಚ್ಚಿನ ಸಮಯವನ್ನು ಕಳೆಯುವ ಇತರ ಸದಸ್ಯರಿಂದಲೂ ಇದೇ ರೀತಿಯ ಮಾಹಿತಿಯನ್ನು ಸಂಗ್ರಹಿಸುವುದು ಅತ್ಯಗತ್ಯ. ಏಕೆಂದರೆ ಮಗುವು ಬೇರೆ ಬೇರೆ ಪರಿಸರಗಳಲ್ಲಿ ಬೇರೇಯೇ ದಿನಚರಿ ಮತ್ತು ಭಿನ್ನ ನಿರೀಕ್ಷೆಗಳನ್ನು ಹೊಂದಿರುವುದರಿಂದ, ಆರೈಕೆದಾರರನ್ನು ತಂಡದ ಸದಸ್ಯರನ್ನಾಗಿ ಸೇರಿಸಿಕೊಳ್ಳುವುದು ಮತ್ತು ಎಲ್ಲಾ ಕಡೆಗಳಲ್ಲೂ ಮಗುವಿನ ಮತ್ತು ಕುಟುಂಬದ ಅಗತ್ಯಗಳನ್ನು ಪೂರೈಸುವ ಫಲಿತಾಂಶಕ್ಕಾಗಿ ಒಟ್ಟಾಗಿ ಕೆಲಸ ಮಾಡುವುದು ಮುಖ್ಯವಾಗಿದೆ.

ಈ ಮಾಹಿತಿಯು ಮಗುವಿನ ತಂದೆತಾಯಿ ಮತ್ತು ಆರೈಕೆದಾರರಿಗೆ ಮಗು ಮತ್ತು ಕುಟುಂಬದ ಆಶಯಗಳು ಮತ್ತು ಆದ್ಯತೆಗಳನ್ನು ಗುರುತಿಸಲು ಸಹಾಯ ಮಾಡುತ್ತದೆ. ಕಾರ್ಯಸಮರ್ಥ ಮಾಪನ ಮತ್ತು ವ್ಯ.ಕು.ಸೇ ಫಲಿತಾಂಶಗಳ ಅಭಿವೃದ್ಧಿಯ ಲಕ್ಷ್ಯವನ್ನು ನಿರ್ಧರಿಸಲು ಈ ಆದ್ಯತೆಗಳನ್ನು ಉಪಯೋಗಿಸಲಾಗುತ್ತದೆ. ಆದ್ಯತೆಗಳು ಅಥವಾ ಅಪೇಕ್ಷಿತ ಬದಲಾವಣೆಗಳು ದೈನಂದಿನ ಚಟುವಟಿಕೆಗಳ ಮೇಲೆ ಹೇಗೆ ಪರಿಣಾಮ ಬೀರುತ್ತವೆ ಎಂಬುದನ್ನು ಅರ್ಥಮಾಡಿಕೊಳ್ಳಲು ಶೋಧನಾತ್ಮಕ ಪ್ರಶ್ನೆಗಳ ಅಗತ್ಯವಿದೆ. ಇವು ಈ ಕೆಳಗಿನ ಪ್ರಶ್ನೆಗಳನ್ನು ಒಳಗೊಂಡಿರಬಹುದು:.

• ಅದು ನಿಮ್ಮ ದಿನದಲ್ಲಿ ಏನು ಬದಲಾವಣೆಯನ್ನು ತರುತ್ತದೆ ಅಥವಾ ನಿಮ್ಮ ದೈನಂದಿನ ಜೀವನದ ವಿವಿಧ ಸಮಯಗಳನ್ನು ಹೇಗೆ ಸುಲಭವಾಗಿಸುತ್ತದೆ?
• ಬದಲಾವಣೆಗಳು ಯಾವಾಗ ಹೆಚ್ಚು ಸಹಾಯಕ ಮತ್ತು ಗಮನಾರ್ಹವಾಗಿರುತ್ತವೆ?
• ಎಲ್ಲವೂ ಸುಸೂತ್ರವಾಗಿ ನಡೆಯುತ್ತಿರುವಂತಹ ಒಂದು ಮಾದರಿ ಸನ್ನಿವೇಶವನ್ನು ವರ್ಣಿಸಿ. ಆ ಸಮಯದಲ್ಲಿ ನೀವು, ನಿಮ್ಮ ಮಗು ಮತ್ತು ಇತರರು ಏನು ಮಾಡುತ್ತಿರುತ್ತೀರಿ?

- __ಸಂದರ್ಭದಲ್ಲಿ ನಿಮಗೆ ಏನನ್ನಿಸುತ್ತದೆ.
- ಆ ಸನ್ನಿವೇಶದಲ್ಲಿ ಮಗುವಿನ ಭಾವನೆಗಳೇನಿತ್ತು ಎಂದು ನೀವು ಆಲೋಚಿಸುತ್ತೀರಿ?

- ನಿಮ್ಮ ಮಗುವಿನಲ್ಲಿ ನಿಮಗೆ ಖುಶಿಕೊಡುವ ವಿಚಾರಗಳು ಯಾವುವು?
- ನಿಮ್ಮ ದೈನಂದಿನ ಯಾವ ನಿಯತ ಕಾರ್ಯಗಳು ಸರಿಯಾಗಿ ಸಾಗುತ್ತವೆ/ ಸವಾಲಾಗುತ್ತವೆ?
- ಇಲ್ಲಿಯವರೆಗೆ ನೀವು ಏನನ್ನೆಲ್ಲಾ ಪ್ರಯತ್ನಿಸಿದ್ದೀರಿ?
- ಮಗುವು ಯಶಸ್ವಿಯಾಗಲು ನಾವು ಯಾವೆಲ್ಲ ರೀತಿಯ ವ್ಯವಸ್ಥೆಗಳನ್ನು ಮಾಡಬಹುದು?
- ನಿಮ್ಮ ಕುಟುಂಬದ ದಿನವನ್ನು ಯಶಸ್ವಿ ದಿನವನ್ನಾಗಿಸಲು ನಾವು ಯಾವ ರೀತಿ ಸಹಾಯ ಮಾಡಬಹುದು?
- ಒಂದು ಯಶಸ್ವಿ ದಿನ ಹೇಗಿರಬಹುದು ಎನ್ನುತ್ತೀರಿ?
-

ಪೋಷಕರು ಈಗಾಗಲೇ ಹಂಚಿಕೊಂಡಿರುವ ಮಾಹಿತಿಯನ್ನು ವೃತ್ತಿಗಾರರು ಮರುಪರಿಶಿಲನೆ ಮಾಡುವುದು ಸಹಾಯವಾಗಬಲ್ಲದು ಉದಾಹರಣೆಗೆ: "ನಮ್ಮ ಆರಂಭಿಕ ಭೇಟಿಯಲ್ಲಿ ನೀವು ಹುಡುಗರು ಯಾವುದೇ **ಉದ್ರೇಕಕ್ಕೆ ಒಳಗಾಗದೆ ಒಟ್ಟಾಗಿ ಆಡಿದರೆ ಸಾಕು ಎಂದು ಆಶಿಸುತ್ತೀರಿ ಎಂದು ಹೇಳಿದ್ದಿರಿ. " ನೀವು, ನಿಮಗೆ ಕುಟುಂಬ ಸಮೇತರಾಗಿ ರೆಸ್ಟೋರೆಂಟ್‌ಗೆ ಹೋಗಲಾಗುವುದಿಲ್ಲ ಏಕೆಂದರೆ ಸಾರಾ ಭೋಜನದುದ್ದಕ್ಕೂ ಕಿರುಚಾಡುತ್ತಾಳೆ" ಎಂದು ಹೇಳಿದ್ದರಿ''.

(ಗಮನಿಸಿ **a meltdown ಎನ್ನುವುದಕ್ಕೆ ಸರಿಯಾದ ಕನ್ನಡ ಪದ ಸಿಗುತ್ತಿಲ್ಲ. ಈ ನುಡಿಗಟ್ಟಿನ ಅರ್ಥ - ಮಕ್ಕಳು ( ಕೆಲವೊಮ್ಮೆ ಪ್ರೌಢರೂ) ಬಹಳ ಸಂವೇದನೆಗಳು, ಹೊಸ ವಿಷಯಗಳು ಇರುವ ಅಥವಾ ಅಪರಿಚಿತ ಸಂದರ್ಭಗಳಲ್ಲಿ ಭಾವಾವೇಶಕ್ಕೆ ಒಳಗಾಗಿ ತಾತ್ಕಾಲಿಕವಾಗಿ ತಮ್ಮ ವರ್ತನೆಯ ಮೇಲೆ ನಿಯಂತ್ರಣ ಕಳೆದುಕೊಳ್ಳುವುದು.ಇದು Tantrum ಅಲ್ಲ, ತಮ್ಮ ಹಠಕ್ಕೆ ಮಣಿಯದಿದ್ದರೆ ಮಕ್ಕಳು ನಡೆಸುವ ರಚ್ಚೆ Tantrum )

ಮಾಹಿತಿ ಸಂಗ್ರಹಣೆ ಮಾಡುವಾಗ ಮಗುವಿನ ಮತ್ತು ಕುಟುಂಬದ ಆಸಕ್ತಿಗಳನ್ನು ಗುರುತಿಸುವುದು ಪ್ರಮುಖವಾದುದು. ಐಎಫ್ಎಸ್‌ಪಿ (IFSP) ಫಾರ್ಮ್‌ನಲ್ಲಿ/ನಮೂನೆಯಲ್ಲಿ ಸೇರಿಸಲಾದ ಪ್ರಶ್ನೆಗಳನ್ನು ಅವರ ಆಸಕ್ತಿಯ ಕುರಿತಾದ ವಿವರಗಳನ್ನು ಕಲೆಹಾಕುವಂತೆ ವಿನ್ಯಾಸಗೊಳಿಸಲಾಗಿದ್ದು, ಪ್ರಸ್ತುತ ಅವರು ತಮ್ಮ ಯಾವ ಆಸಕ್ತಿಯ ಕ್ಷೇತ್ರದಲ್ಲಿ ಉತ್ತಮವಾಗಿ ತೊಡಗಿಸಿಕೊಳ್ಳುತ್ತಿದ್ದಾರೆ ಮತ್ತು ಯಾವುದು ಅವರಿಗೆ ಸವಾಲಾಗಿದೆ ಎಂಬುದರತ್ತ ಗಮನ ಹರಿಸುವಂತೆ ಮಾಡುತ್ತದೆ. ಮಗುವಿನ ಆಸಕ್ತಿಗಳ ಬಗ್ಗೆ ಸಂಗ್ರಹಿಸಲಾದ ಮಾಹಿತಿಯನ್ನು ಮಗುವಿಗೆ ಆಸಕ್ತಿದಾಯಕವಾದ ಮತ್ತು ಅದು ತೊಡಗಿಸಿಕೊಳ್ಳುವ ನೈಜ ಜೀವನದ ಕಾರ್ಯಕಾರಿ ಚಟುವಟಿಕೆಗಳ ಬಗ್ಗೆ ತಿಳಿದುಕೊಳ್ಳಲು ಬಳಸಲಾಗುತ್ತದೆ. ಈ ಚಟುವಟಿಕೆಗಳು ಹೊಸ ಕೌಶಲ್ಯಗಳನ್ನು ಕಲಿಯಲು ಮತ್ತು ಅಭ್ಯಸಿಸಲು ಅವಕಾಶಗಳನ್ನು ಒದಗಿಸುತ್ತವೆ. ಇದರಿಂದಾಗಿ ಮಗು ಧನಾತ್ಮಕ ಸಾಮಾಜಿಕ ಸಂಬಂಧಗಳನ್ನು ಆನಂದಿಸಬಹುದು (ಉದಾ., , **ಸ್ನಾನದ ಸಮಯದಲ್ಲಿ ದೂರವಿರುವ ಆಟಿಕೆಗಳನ್ನು ಎಟುಕಿಸಿಕೊಂಡು ಆಟವಾಡುವುದು, ಕಾರ್ ಸವಾರಿಯ ಸಮಯದಲ್ಲಿ ***ನೇಮಿಂಗ್ ಗೇಮ್ ಆಟಗಳನ್ನು ಆಡುವುದು). ಮಗುವನ್ನು ತೊಡಗಿಸಿಕೊಳ್ಳುವ ಚಟುವಟಿಕೆಗಳಲ್ಲಿ ಆಯಾ ಸಂದರ್ಭಗಳಿಗೆ ಅನುಗುಣವಾಗಿ ಬಳಸಿಕೊಳ್ಳಲಾಗುವ ಐಎಫ್ಎಸ್‌ಪಿ ಫಲಿತಾಂಶಗಳು ಹೆಚ್ಚು ಪರಿಣಾಮಕಾರಿಯಾಗಿರುತ್ತವೆ. ಸರಿಯಾಗಿರುವ ಸನ್ನಿವೇಶಗಳನ್ನು ಸವಾಲೆನಿಸುವ ಕೌಶಲ್ಯಗಳನ್ನು ಪರಿಚಯಿಸಲು, ಅಭ್ಯಸಿಸಲು ಮತ್ತು ಕರಗತ ಮಾಡಿಕೊಳ್ಳಲು ಸೂಕ್ತವಾದ ಸಂದರ್ಭಗಳನ್ನು ಬಳಸಿಕೊಳ್ಳುವುದು ಉತ್ತಮ ವಿಧಾನವಾಗಿದೆ. ಸವಾಲಾಗುವ

ಸಂದರ್ಭಗಳನ್ನು, ಒಂದು ನಿಯತಕಾರ್ಯ ಅಥವಾ ಮಗು ಹೆಚ್ಚು ಯಶಸ್ವಿಯಾಗಿ ಭಾಗವಹಿಸಲು ಬೇಕಾದ ಕೌಶಲ್ಯ ಅಥವಾ ಸಲಕರಣೆಯನ್ನು ಅಳವಡಿಸಿ ನಿಭಾಯಿಸಬಹುದು.

(** ಮಕ್ಕಳನ್ನು ಸ್ನಾನಮಾಡಿಸುವ ಟಬ್‌ನ ಬಳಿ ಬಾತುಕೋಳಿ, ಮೀನು, ಕಪ್ಪೆ ಮುಂತಾದ ಆಕಾರದ ರಬ್ಬರ್ ಬೊಂಬೆಗಳನ್ನಿಡುವ ಪದ್ಧತಿಗೆ ಇದು ಸಂಬಂಧಿಸಿದೆ. )

(*** ನೇಮಿಂಗ್ ಗೇಮ್- ಪಾಶ್ಚಾತ್ಯ ದೇಶಗಳಲ್ಲಿ ಕಾರಿನಲ್ಲಿ ಪ್ರಯಾಣಿಸುವಾಗ ಮಕ್ಕಳನ್ನು ರಂಜಿಸಲು ಸಾಮಾನ್ಯವಾಗಿ ಬಳಸುವ ಆಟ. ಮಕ್ಕಳಿಗೆ ತಾವು ನೋಡುವುದನ್ನು ಹೆಸರಿಸಲು, ಅಥವಾ ( ದೊಡ್ಡವರಾಗಿದ್ದರೆ) ಕಾರುಗಳ ಮಾಡೆಲ್ ಗುರುತಿಸಲು, ಇಲ್ಲವೇ ವಾಹನಗಳ ಬಣ್ಣ ಹೇಳಲು ತೊಡಗಿಸುವುದು)

ಕುಟುಂಬದ ಹಿತಾಸಕ್ತಿಗಳ ಅನ್ವೇಷಣೆ ಕೂಡ ಫಲಿತಾಂಶಗಳ ಅಭಿವೃದ್ಧಿಗೆ ಕಾರಣವಾಗುತ್ತದೆ ''ನಿಮಗೆ ಮಾಡಲು ಇಷ್ಟವಿರುವ ಆದರೆ ನಿಮಗೆ ಈಗ ಮಾಡಲು ಸಾಧ್ಯವಾಗದ ಚಟುವಟಿಕೆಗಳು ಯಾವುದಾದರೂ ಇವೆಯೇ? ಎಂಬಂತಹ ಪ್ರಶ್ನೆಗಳನ್ನು ಕೇಳುವುದು, ಸಂಭಾವ್ಯ ಫಲಿತಾಂಶದ ಹೇಳಿಕೆಗಳನ್ನು ನೀಡುತ್ತದೆ (ಉದಾಹರಣೆಗೆ, ನನ್ನ ಪತಿಯೊಂದಿಗೆ ಹೊರಗೆ ಹೋಗುವುದು, ಬೈಕು ಸವಾರಿ ಮಾಡುವುದು, ನನ್ನ ಮಗುವನ್ನು ಚರ್ಚ್‌ನ ಮಕ್ಕಳ ಆರೈಕೆ ಕೇಂದ್ರಕ್ಕೆ ಕರೆದೊಯ್ಯುವುದು, ಇತ್ಯಾದಿ). ಮಗುವಿನ ಮತ್ತು ಕುಟುಂಬದ ಹಿತಾಸಕ್ತಿಗಳನ್ನು ಅರ್ಥಮಾಡಿಕೊಳ್ಳಲು ಯಾವ ಮಧ್ಯಸ್ತಿಕೆ ತಂತ್ರಗಳನ್ನು ಆಯ್ಕೆಮಾಡಿಕೊಳ್ಳಬೇಕು ಎಂಬುದರ ಕುರಿತಾದ ಅಮೂಲ್ಯವಾದ ಮಾಹಿತಿಯನ್ನು ಇದು ಒದಗಿಸುತ್ತದೆ.

ಈ ಪ್ರಕ್ರಿಯೆಯಲ್ಲಿ, ಕುಟುಂಬದ ಚಟುವಟಿಕೆಗಳು, ಅವರ ನಿರೀಕ್ಷೆಗಳು ಮತ್ತು ಮೌಲ್ಯಗಳ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಬಹುದು. ಕುಟುಂಬದ ಸಹಯೋಗದಿಂದ ಫಲಿತಾಂಶಗಳನ್ನು ಅಭಿವೃದ್ಧಿಪಡಿಸಲು ಇದು ಅಗತ್ಯವಾದ ಮಾಹಿತಿಯಾಗಿದೆ. ಐಎಫ್‌ಎಸ್‌ಪಿ (IFSP) ಫಲಿತಾಂಶಗಳನ್ನು ಕುಟುಂಬವು ನಿರ್ಧರಿಸುತ್ತದೆಯಾದರೂ, ಕೆಲವೊಮ್ಮೆ ಇದು ಅದರ ಆರಂಭವಾದರೂ, ಫಲಿತಾಂಶಗಳನ್ನು ನಿರ್ಧರಿಸುವುದು/ ಬರೆಯುವುದು ಆರೈಕೆದಾರರಿಗೆ ಪರಿಚಿತ ಕೆಲಸವಲ್ಲ. . ಕುಟುಂಬಗಳ ಕ್ರಿಯಾತ್ಮಕ ಫಲಿತಾಂಶಗಳನ್ನು ನಿರ್ಧರಿಸಲು ಈ ಮಾಹಿತಿಯನ್ನು ಹೇಗೆ ಬಳಸಬಹುದು ಎಂಬುದಕ್ಕೆ ಇಲ್ಲಿ ಕೆಲವು ಉದಾಹರಣೆಗಳಿವೆ:

- ಊಟವನ್ನು ತಯಾರಿಸುವುದು ಒಂದು ಪ್ರಮುಖ ಚಟುವಟಿಕೆಯಾದರೆ, ಅದು ಉಪಯೋಗಿಸಬಹುದಾದ ಒಂದು ಉತ್ತಮ ನಿಯತಕಾರ್ಯವಾಗಬಹದು.
- ಕುಟುಂಬದ ಸಂಸ್ಕೃತಿಯು ಚಿಕ್ಕ ಮಕ್ಕಳಿಗೆ ಸ್ವಾತಂತ್ರ್ಯ ಅಥವಾ ಅವರ ಸ್ವಯಂ-ಆರೈಕೆಯ ಕೌಶಲ್ಯಗಳಿಗೆ ಆದ್ಯತೆ ನೀಡದಿದ್ದರೆ, ಅದು ಫಲಿತಾಂಶಕ್ಕೆ ಸೂಕ್ತವಾದ ವಿಷಯವಾಗುವುದಿಲ್ಲ.
- ಕುಟುಂಬವು ಅಥವಾ ಅಲ್ಲಿನ ಸದಸ್ಯರು ನೃತ್ಯ ಅಥವಾ ಸಂಗೀತದಂತಹ ಗುಂಪು ಚಟುವಟಿಕೆಗಳಲ್ಲಿ ಭಾಗವಹಿಸಿದರೆ ಅವರು ಅದರಲ್ಲಿ ತಮ್ಮ ಮಗುವಿನ ಭಾಗವಹಿಸುವಿಕೆಯನ್ನು ಬೆಂಬಲಿಸುವಂತಹ ಫಲಿತಾಂಶವನ್ನು ಬಯಸಬಹುದು.

## ಮಗುವಿನ ಕಾರ್ಯಕಾರಿ ಮೌಲ್ಯಮಾಪನ

### ಆವಶ್ಯಕ ಕಾರ್ಯವಿಧಾನ

ಮಗುವಿನ ವಿಶಿಷ್ಟ ಸಾಮರ್ಥ್ಯ ಮತ್ತು ಅಗತ್ಯಗಳನ್ನು ಗುರುತಿಸಲು ಮತ್ತು ಆ ಅಗತ್ಯಗಳನ್ನು ಪೂರೈಸಲು ಸೂಕ್ತವಾದ ಆರಂಭಿಕ ಹಂತದಲ್ಲಿ ಮಧ್ಯಪ್ರವೇಶಿಸಬಲ್ಲ ಸೇವೆಗಳನ್ನು ಗುರುತಿಸಲು ಪ್ರತಿ ಶಿಶು ಅಥವಾ ಅಂಗವೈಕಲ್ಯ ಹೊಂದಿರುವ ಮಕ್ಕಳಲ್ಲಿ

ಮಗುವಿನ ಬಹುಶಿಸ್ತೀಯ ವಿಷಯಗಳ ಮೌಲ್ಯಮಾಪನವನ್ನು ಅರ್ಹ ಸಿಬ್ಬಂದಿಗಳು ನಡೆಸಬೇಕು. ಮಕ್ಕಳ ಮೌಲ್ಯಮಾಪನವು ಸಮಗ್ರವಾಗಿರಬೇಕು ಮತ್ತು ಮಕ್ಕಳ ಪ್ರಗತಿಯ ಮೌಲ್ಯಮಾಪನಕ್ಕಾಗಿ ಅದು ಅವರ ವಿಕಾಸದ ಎಲ್ಲಾ ಕ್ಷೇತ್ರಗಳನ್ನು ಒಳಗೊಳ್ಳಬೇಕು.

ತಾರ್ಕಿಕ ವಿವರಣೆ** (Ratinale)

** (Rational ಮತ್ತು Ratinale ಪದಗಳಲ್ಲಿ ವ್ಯತ್ಯಾಸವಿದೆ. Ratinale ಎಂದರೆ ಯಾವುದಾದರೂ ಕಾರ್ಯದ ಹಿಂದಿರುವ ಅಥವಾ ಅದಕ್ಕೆ ಆಧಾರವಾದ ಕಾರಣಗಳು, ಅದರ ವಿವರಣೆ. ತರ್ಕ ಎಂದಲ್ಲ)

ಶಿಶುಗಳು ಮತ್ತು ಅಂಬೆಗಾಲಿಡುವ ಮಕ್ಕಳ ವಿಕಾಸದ ಕ್ಷೇತ್ರಗಳು ಪರಸ್ಪರ ಅವಲಂಬಿತವಾಗಿವೆ ಮತ್ತು ಪರಸ್ಪರ ಸಂಬಂಧ ಹೊಂದಿರುತ್ತವೆ. ನಿರ್ದಿಷ್ಟ ವಿಕಾಸಾತ್ಮಕ ಸಮಸ್ಯೆಗಳು ವಿಕಾಸದ ಅನೇಕ ಕ್ಷೇತ್ರಗಳಲ್ಲಿನ ವಿಳಂಬಗಳು ಅಥವಾ ಅಸಾಮರ್ಥ್ಯಗಳೊಂದಿಗೆ ಸಂಬಂಧ ಹೊಂದಿರಬಹುದು. ಉದಾಹರಣೆಗೆ, ಮಗು ಸಂವಹನ ಕ್ಷೇತ್ರದಲ್ಲಿ ಕಡಿಮೆ ಅಂಕ ಪಡೆಯುವುದಕ್ಕೆ ಶ್ರವಣನಷ್ಟತೆ, ಭಾಷೆಯನ್ನು ಕಲಿಯುವುದನ್ನು ಕಷ್ಟಕರವಾಗಿಸುವ ಸಂಜ್ಞಾನಾತ್ಮಕ ವಿಳಂಬ ಅಥವಾ ಪಾಲಕ-ಶಿಶು ಅಂತರಕ್ರಿಯೆಗೆ ತೊಡಕಾಗುವ ಸಾಮಾಜಿಕ-ಸಂವೇಗಾತ್ಮಕ ಸಮಸ್ಯೆಗಳು ಕಾರಣವಾಗಬಹುದು. ಕ್ರಿಯಾತ್ಮಕ ಐಎಫ್ಎಸ್‌ಪಿ ಫಲಿತಾಂಶಗಳನ್ನು ಅಭಿವೃದ್ಧಿಪಡಿಸಲು, ಮಧ್ಯಪ್ರವೇಶಿಸುವಿಕೆಗೆ ಸೂಕ್ತ ವಿಧಾನಗಳು ಮತ್ತು ತಂತ್ರಗಳನ್ನು ಯೋಜಿಸಲು ಮತ್ತು ಹಂತ ಹಂತದ ಪ್ರಗತಿಯನ್ನು ಮೇಲ್ವಿಚಾರಣೆ ಮಾಡಲು ಮಗುವಿನ ವಿಕಾಸ ಮತ್ತು ಭಾಗವಹಿಸುವಿಕೆಯ ಕುರಿತ ಸಮಗ್ರ, ಆಳವಾದ ಮಾಹಿತಿ ಅತ್ಯಗತ್ಯ.

ಈ ಕೆಳಗಿನ ಭಾಗವನ್ನು ಅನುವಾದಿಸಿಲ್ಲ. ಮೂರು ಪುಟ ಬಿಟ್ಟು ಹೋಗಿದೆ. ಮೂಲ ಲೇಖನದ ೪, ೫, ೬ ಪುಟಗಳು.

### (Functional Child Assessment Practices to Consider

## Functional IFSP Outcomes

IFSP outcomes answer the question: What would your family like to see happen for your child/family?

### Functional IFSP Outcomes for Children and Families

Table ೧

| What the Parent States | This is the Outcome | Not |
|---|---|---|

### Functional IFSP Outcomes Supported by the FRC Related to Accessing Community Resources and Supports

Table 2 provides examples of using what the parent states to develop a high-quality outcome for accessing community resources and supports:

## Outcomes Development )

**( ಗಮನಿಸಿ ಮೇಲಿನ ಎರಡು ಟೇಬಲ್ ಗಳು, ಎರಡು ಪುಟ ಅನುವಾದವಾಗಿಲ್ಲ).**

**ನಾನು ಅನುವಾದ ಮಾಡಿರುವುದು ನೀಲಿ ಬಣ್ಣದಲ್ಲಿದೆ. )**

## ಗಮನಿಸಬೇಕಾದ ಕಾರ್ಯಕಾರಿ ಶಿಶು ಮಾಪನ ವಿಧಾನಗಳು

- ತಂಡದ ಪ್ರತಿಸದಸ್ಯರೂ ಪ್ರಾಸ್ತಾವಿಕ ( referral) ಭೇಟಿಯಿಂದ ಆರಂಭಿಸಿ ಕುಟುಂಬದಿಂದ ಕಲೆಹಾಕಿದ ಉಪಯುಕ್ತ ಮಾಹಿತಿಗಳನ್ನು ಗುಂಪಿನೊಡನೆ ಹಂಚಿಕೊಳ್ಳಬೇಕು.
- ಕಾರ್ಯಕಾರಿ ಶಿಶು ಮಾಪನ ಸಮಗ್ರವಾಗಿದ್ದು ಮಗುವಿನ ವಿಕಾಸದ ಎಲ್ಲಾ ಕ್ಷೇತ್ರಗಳಲ್ಲಿನ ಕಾರ್ಯದ ಮಾಹಿತಿ ಒಳಗೊಂಡಿರಬೇಕು.
- ಯಾವ ವಿಷಯಗಳಲ್ಲಿ ಯಶಸ್ವೀ ಭಾಗವಹಿಸುವಿಕೆ ಇದೆ ಮತ್ತು ಪ್ರಸ್ತುತ ಸವಾಲುಗಳೇನು ಎಂದು ನಿರ್ಧರಿಸಲು, ಮಗುವನ್ನು ದಿನನಿತ್ಯದ ನಿಯತಕಾರ್ಯಗಳ ಮತ್ತು ಸಮವಯಸ್ಕರ ಹಾಗೂ ಆರೈಕೆದಾರರರೊಡಗಿನ ಅಂತರಕ್ರಿಯೆಯ ಹಿನ್ನೆಲೆಯಲ್ಲಿ ಅವಲೋಕಿಸಿ.
- ಎಲ್ಲಾ ವಿಕಾಸದ ಕ್ಷೇತ್ರಗಳ ಬಲಗಳು ಮತ್ತು ಅಗತ್ಯಗಳನ್ನು ಉತ್ತಮವಾಗಿ ಅರಿತುಕೊಳ್ಳಲು ಪಠ್ಯಕ್ರಮ-ಆಧರಿತ ಮಾಪನ (CBAs) ದ ಕೌಶಲ್ಯ ಅನುಕ್ರಮತೆ ಮತ್ತು ದತ್ತಾಂಶ ವಿಹಿತಾಚರಣೆಗಳನ್ನು ಬಳಸಿ. ಅವಲೋಕನ ವಿಧಾನಗಳು ಮತ್ತು ಪಠ್ಯಕ್ರಮ-ಆಧರಿತ ಮಾಪನದಲ್ಲಿನ ಪಾಲಕರ ಮಾಪನ ಭಾಗವನ್ನು ಮಕ್ಕಳ ವಿಕಾಸ ಮತ್ತು ಅವರ ದಿನನಿತ್ಯದ ಜೀವನದಲ್ಲಿ ಭಾಗವಹಿಸುವಿಕೆಯ ತಿಳಿವನ್ನು ಉತ್ತಮಗೊಳಿಸಿಕೊಳ್ಳಲು ಬಳಸಿ.
- ಮಗುವಿನ ವಿಕಾಸ ಮತ್ತು ಕೌಟುಂಬಿಕ ನಿಯತಕಾರ್ಯಗಳು ಹಾಗೂ ಚಟುವಟಿಕೆಗಳಲ್ಲಿ ಭಾಗವಹಿಸುವಿಕೆಯ ಎಲ್ಲಾ ಮಾಹಿತಿಯನ್ನೂ ಸಂಶ್ಲೇಷಿಸಿ ವ್ಯ-ಕು.ಸೇ ಯ ಕಾರ್ಯಸಮರ್ಥ ಸಾರಾಂಶ ನೀಡಿ.
- ಮಧ್ಯಸ್ಥಿಕೆಯ ತಂತ್ರಗಳನ್ನು ಆರಿಸಲು ಮತ್ತು ಪರಿವರ್ತಿಸಲು, ಹಾಗೂ ಶಿಶು ಫಲಿತಾಂಶ ಸಾರಾಂಶ ವಿವರಣಾ ಹೇಳಿಕೆಗಳನ್ನು ಆಯ್ದುಕೊಳ್ಳಲು, ಮಗುವಿನ ಪ್ರಾರಂಭಿಕ ಮಾಪನದ ಮಾಹಿತಿಯನ್ನು ಮಗುವಿನ ವ್ಯ-ಕು-ಸೇ ಯ ಪ್ರಗತಿಯ ಮೇಲ್ವಿಚಾರಣೆಗೆ ಹೋಲಿಕೆಯ ಬಿಂದುವಾಗಿ ಉಪಯೋಗಿಸಿ.

ವಿಕಲತೆಯುಳ್ಳ ವ್ಯಕ್ತಿಗಳ ಶಿಕ್ಷಣ ಸಂಹಿತೆಯ ಭಾಗ- ಸಿ, ಅರ್ಹ ಸಿಬ್ಬಂದಿ, ಚೆನ್ನಾಗಿ ತಿಳಿದಿರುವ ನೈದಾನಿಕ ಅಭಿಪ್ರಾಯಗಳನ್ನು ಪ್ರತಿ ಮಾಪನ ವಿಧಾನದಲ್ಲಿ ಕ್ರಮಬದ್ಧ ಅಂಶವಾಗಿ ಬಳಸಬೇಕೆಂದು ಕೋರುತ್ತದೆ.

## ಕಾರ್ಯಸಮರ್ಥ ವ್ಯ-ಕು-ಸೇ ಫಲಿತಾಂಶಗಳು

ವ್ಯ--ಕು-ಸೇ ಫಲಿತಾಂಶಗಳು ಈ ಪ್ರಶ್ನೆಗೆ ಉತ್ತರಿಸುತ್ತವೆ: ನಿಮ್ಮ ಕುಟುಂಬ ನಿಮ್ಮ ಮಗು / ಕುಟುಂಬಕ್ಕೆ ಏನು ಆಗಬೇಕೆಂದು ಇಷ್ಟಪಡುತ್ತದೆ?

## ಮಕ್ಕಳ ಮತ್ತು ಕುಟುಂಬಗಳ ಕಾರ್ಯಸಮರ್ಥ ವ್ಯ-ಕು-ಸೇ ಫಲಿತಾಂಶಗಳು

- ಮಕ್ಕಳ ಕಲಿಕೆಯನ್ನು ದೈನಂದಿನ ಚಟುವಟಿಕೆಗಳಲ್ಲಿ ಕಾರ್ಯಕಾರಿ ಭಾಗವಹಿಸುವಿಕೆಯ ಮೂಲಕ ಉತ್ತಮಪಡಿಸುತ್ತವೆ ( ಮಗು ಶಿಕ್ಷಣಾರ್ಥಿ)*
- ತಮ್ಮ ಮಗುವಿನ ಅಗತ್ಯಗಳನ್ನು ಪೂರೈಸಲು ಕುಟುಂಬಗಳ ಸಾಮರ್ಥ್ಯವನ್ನು ಉತ್ತಮ ಪಡಿಸುತ್ತವೆ ( ಕುಟುಂಬ ಶಿಕ್ಷಣಾರ್ಥಿ)
- (ಫಲಿತಾಂಶಗಳು) ಕುಟುಂಬಕ್ಕೆ / ಆರೈಕೆದಾರರಿಗೆ ಅರ್ಥಪೂರ್ಣವಾಗಿವೆ ( ಆದ್ಯತೆಗಳು)
- (ಫಲಿತಾಂಶಗಳು) ಸಂಬಂಧಗಳು ಅಥವಾ ಸಾಮಾಜಿಕ ಅಂತರಕ್ರಿಯೆಯ ಹಿನ್ನೆಲೆಯಲ್ಲಿ ಅಪೇಕ್ಷಿತ ಕಾರ್ಯಗಳನ್ನು ಉದ್ದೇಶೀಸುತ್ತವೆ ( ಉದಾ: ಶಿಶು ಆರೈಕೆ ಕೇಂದ್ರದಲ್ಲಿ ಆಡುವಾಗ ಸಮವಯಸ್ಕರೊಡನೆ ಸಂವಹನಕ್ಕೆ ಸರಿಯಾದ ಪದಗಳನ್ನು ಬಳಸುವುದು)
- ಮಗು ಸಮರ್ಥವಾಗಿ ಮತ್ತು ಯಶಸ್ವಿಯಾಗಬಲ್ಲ ಚಟುವಟಿಕಾ ಸನ್ನಿವೇಶಗಳನ್ನು ವಿಸ್ತರಿಸುವುದು.
- (ಫಲಿತಾಂಶಗಳು) ಮಗು ಮತ್ತು ಕುಟುಂಬದ ಆಸಕ್ತಿ ಹಾಗೂ ಸಾಂಸ್ಕೃತಿಕ ಮೌಲ್ಯಗಳನ್ನು ಆಧರಿಸಿವೆ
- ಶಿಶು-ಪಾಲಕ ಅಂತರಕ್ರಿಯೆಗಳನ್ನು ಪ್ರೋತ್ಸಾಹಿಸುತ್ತವೆ.

*(Sheldon and Rush, 2009)

ಕೋಷ್ಟಕ ೧, ಪಾಲಕರು ಮಕ್ಕಳು ಮತ್ತು ಕುಟುಂಬಗಳಿಗೆ ಉತ್ತಮ ಗುಣಮಟ್ಟದ ಫಲಿತಾಂಶಗಳು ಎಂದು ಹೇಳುವುದನ್ನು ಉದಾಹರಣೆಯಾಗಿ ನೀಡಿದೆ. ( ಲಗತ್ತು ಸಿ ಯನ್ನು ಸಂಪೂರ್ಣ ವ್ಯ-ಕು-ಸೇ ಫಲಿತಾಂಶಗಳ ಉದಾಹರಣೆಗೆ ನೋಡಿ)

**ble 1: Functional IFSP Outcomes for Children and Families**

| ಪಾಲಕರು ಏನು ಹೇಳುತ್ತಾರೆ | ಇದು ಫಲಿತಾಂಶ | ಇದು ಫಲಿತಾಂಶ ಅಲ್ಲ |
|---|---|---|
| ಎಮಾನ್ಯುಯಲ್ ಕುಳಿತುಕೊಳ್ಳಲು ಕಷ್ಟಪಡುವುದರಿಂದ ನಾವು ಒಟ್ಟಾಗಿ ಊಟಮಾಡುವುದು ಮತ್ತು ಆಟವಾಡುವುದು ಸಾಧ್ಯವಿಲ್ಲದಿರುವುದು ನಿರಾಶಾದಾಯಕ | ಎಮಾನ್ಯುಯಲ್ ಆಟಿಕೆಗಳೊಡನೆ ಆಟವಾಡುತ್ತಾನೆ ಮತ್ತು ತಾನೇ ಕುಳಿತು ಕುಟುಂಬದೊಡನೆ ಊಟಮಾಡುತ್ತಾನೆ. . | ಎಮಾನ್ಯುಯಲ್ ಕುಳಿತುಕೊಳ್ಳುವ ಸ್ನಾಯುಬಲ ಉತ್ತಮಪಡಿಸಿಕೊಳ್ಳುತ್ತಾನೆ. |
| ಬಾಗಿಲಲಲ್ಲಿ ನಿಂತು ಜೊರ್ಡನ್ ಅಳದಿರದೆ ನಾನು ಶೌಚಗೃಹಕ್ಕೆ ಹೋಗ ಬೇಕು | ಸಶಾ ಶೌಚಗೃಹದಲ್ಲಿರುವಾಗ ಜೊರ್ಡನ್ ಮೂರು ನಿಮಿಷದವರೆಗೂ ಸ್ವತಂತ್ರವಾಗಿ ಆಡ ಬೇಕು | ಜೊರ್ಡನ್ ತನ್ನನು ತಾನೆ ಸಮಾಧಾನಮಾಡಿಕೊಳ್ಳಲು ಕಲಿಯುತ್ತಾನೆ. |
| ನಾನು ನೆಲ್ಲಿಯ ಸಂಪರ್ಕದಲ್ಲಿದ್ದೇನೆ ಎಂದು ಭಾವಿಸಲು ಇಚ್ಛಿಸುತ್ತೇನೆ. ಈಗ ಅವಳಿಗೆ ನಾನು ಇಲ್ಲಿ ಇದ್ದೇನೇ ಎಂದೇ ತಿಳಿಯುವುದಿಲ್ಲ ಎನಿಸುತ್ತದೆ, ಅದರಲ್ಲೂ ಅವಳು ಒಂದೇ ಆಟಿಕೆಯನ್ನು ಹತ್ತಿರದಿಂದ ಗಮನಿಸುತ್ತಿರುವಾಗ. | ಒಟ್ಟಾಗಿ ಆಡುವಾಗ ನೆಲ್ಲಿ ಮೇರಿ-ನೋಯಲ್ ಜೊತೆ ಆಟಗಳು ಮತ್ತು ಹಾಡುಗಳನ್ನು ಮುಖಾ-ಮುಖಿಯಾಗಿ ಆನಂದಿಸುವಳು. | ನೆಲ್ಲಿ ನಾಲ್ಕು ಪ್ರಯತ್ನಗಳಲ್ಲಿ ಮೂರುಬಾರಿಯಾದರೂ ತಾಯಿಯ ಜೊತೆ ದೃಷ್ಟಿ ಜೋಡಿಸುವಳು. . |
| ನಾನು ಕೆಯಾಳನ್ನು ಕಿರಾಣಿ ಅಂಗಡಿಗೆ ಅವಳು ರಂಪಾಟ ಮಾಡದೆ ಕರದೊಯ್ಯಲು ಸಾಧ್ಯವೇ ಇಲ್ಲ. | ಕೆಯಾ ಟಿಫಾನಿಯೊಡನೆ ಕಿರಾನಿ ಅಂಗಡಿಗೆ ಹೋಗುವುದನ್ನು ಆನಂದಿಸಬಲ್ಲಳು | ಕೆಯಾ ಕಿರಾಣಿ ಅಂಗಡಿಯಲ್ಲಿ ಉತ್ತಮ ವರ್ತನೆ ತೋರುವಳು. |

## ಸಮುದಾಯದ ಸಂಪನ್ಮೂಲಗಳು ಮತ್ತು ಆಧಾರಗಳನ್ನು ಪಡೆದುಕೊಳ್ಳಲು ಸಂಬಂಧಪಟ್ಟ FRC ( ಕೌಟುಂಬಿಕ ಸಂಪನ್ಮೂಲ ಕೇಂದ್ರ) ಬೆಂಬಲಿತ ಕಾರ್ಯಕಾರಿ ವ್ಯ-ಕು.ಸೇ ಫಲಿತಾಂಶಗಳು

- ಸಮುದಾಯದ ಸಂಪನ್ಮೂಲಗಳು ಮತ್ತು ಸಹಾಯಗಳನ್ನು ಪಡೆಯುವುದನ್ನು ಬೆಂಬಲಿಸುತ್ತವೆ*
- ಕುಟುಂಬಕ್ಕೆ/ ಆರೈಕೆದಾರರಿಗೆ ಮುಖ್ಯ ಮತ್ತು ಅರ್ಥಪೂರ್ಣವಾದವು ( ಆದ್ಯತೆಗಳು)*

*(Sheldon and Rush, 2009)

ಕೋಷ್ಟಕ ೨ ಸಮುದಾಯದ ಸಂಪನ್ಮೂಲಗಳು ಮತ್ತು ಸಹಾಯಗಳನ್ನು ಪಡೆಯಲು ಉತ್ತಮ ಗುಣಮಟ್ಟದ ಫಲಿತಾಂಶಕ್ಕೆ ಪಾಲಕರ ಹೇಳಿಕೆಗಳನ್ನು ಉದಾಹರಣೆಯಾಗಿ ಉಪಯೋಗಿಸುತ್ತದೆ.

**2: Functional IFSP Outcomes Supported by the FRC Related to Accessing Community Resources and Supports**

| ಪಾಲಕರು ಏನು ಹೇಳುತ್ತಾರೆ | ಇದು ಫಲಿತಾಂಶ | ಇದು ಫಲಿತಾಂಶ ಅಲ್ಲ |
|---|---|---|
| ನಾವು ಇದೀಗ ಈ ಸ್ಥಳಕ್ಕೆ ಬಂದಿದ್ದೇವೆ ಮತ್ತು ಇಲ್ಲಿ ಮಕ್ಕಳ ವೈದ್ಯರು ಇಲ್ಲ. ಇಥಾನ್ ಗೆ ಅಸ್ತಮಾ ಆಮರಿಕೊಂಡಾಗಲೆಲ್ಲಾ ನಾವು ತುರ್ತು ಸೇವೆ ಉಪಯೋಗಿಸುತ್ತಿದ್ದೇವೆ . | ಇಥಾನ್ ಗುಣಮಟ್ಟದ ವೈದ್ಯಕೀಯ ಆರೈಕೆ ಪಡೆಯಲಿಎಂದು ಕುಟುಂಬ ಒಂದು ಪ್ರಾಥಮಿಕ ಸೇವೆ ಒದಗಿಸುವವರನ್ನು ಕಂಡುಕೊಳ್ಳುತ್ತಾರೆ . | ಕುಟುಂಬ ತುರ್ತು ಸೇವೆಗೆ ಹೋಗುವ ಬದಲು ಒಬ್ಬ ವೈದ್ಯರನ್ನು ಕಂಡುಕೊಳ್ಳುತ್ತಾರೆ. . |
| ನನಗೆ ನಾನು ಅನುಭವಿಸುತ್ತಿರುವುದನ್ನು ಅರ್ಥಮಾಡಿಕೊಳ್ಳುವಂತಹ ಯಾರಾದರೂ ಮಾತನಾಡಲು ಇದ್ದಿರಬೇಕಿತ್ತು ಎಂದು ಬಯಸುತ್ತೇನೆ. | ಮೈಕ್ ಪಾಲಕರಲ್ಲಿ ಸಂಪರ್ಕ ಕಲ್ಪಿಸುವ ಸ್ಥಳೀಯ ಪಾಲಕ ಸಂಯೋಜಕರಿಗೆ ಕರೆ ಮಾಡಿ ಸಹಾಯ ಗುಂಪುಗಳ ಸಾಧ್ಯತೆಯ ಬಗ್ಗೆ ವಿಚಾರಿಸುತ್ತಾನೆ. | ಮೈಕ್ ಇತರ ಪಾಲಕರೊಡನೆ ಮಾತನಾಡುತ್ತಾನೆ. |
| ನಾವು ಕೋಲ್ ನನ್ನು ಕಾರಿನಲ್ಲಿ ನಮ್ಮೊಡನೆ ಕರೆದೊಯ್ಯಲು ಬಯಸುತ್ತೇವೆ ಆದರೆ ನಮ್ಮಲ್ಲಿ ಕಾರಿನ ಸೀಟ್ ಇಲ್ಲ ( ಮಕ್ಕಳಿಗೆ ಉಪಯೋಗಿಸುವ ಸೀಟ್) | ಕೆರೆನ್ ಮತ್ತು ಮಾರ್ಕ ಕಾರಿನಲ್ಲಿ ಕೋಲ್ ನೊಡನೆ ಸುರಕ್ಷಿತವಾಗಿ ಪ್ರಯಾಣಿಸಬಲ್ಲರು | ಸಿಬ್ಬಂದಿ ಕಾರಿನ ಸೀಟಿಗೆ ಆರ್ಥಿಕ ಸಹಾಯ ನೀಡುವ ಪರ್ಯಾಯಗಳನ್ನು ಹುಡುಕುತ್ತಾರೆ. |

## ಫಲಿತಾಂಶಗಳ ಅಭಿವೃದ್ಧಿ

ಮೇಲೆ ವಿವರಿಸಿರುವ ಹಾಗೆ ಫಲಿತಾಂಶಗಳ ಅಭಿವೃದ್ಧಿ ಕುಟುಂಬಗಳಿಂದ ಸಂವೇದನಾಶೀಲತೆಯಿಂದ ಮಾಹಿತಿ ಸಂಗ್ರಹಿಸುವುದು ಮತ್ತು ಮಗುವಿನ ಕಾರ್ಯಕಾರಿ ಮಾಪನದೊಂದಿಗೆ ಪ್ರಾರಂಭವಾಗುತ್ತದೆ.
ತಂಡಕ್ಕೆ ಅಗತ್ಯವಿರುವ ಕೌಶಲ್ಯಗಳು ಮತ್ತು ಅಭಿವೃತ್ತಿಗಳು ಇವು: ಕುಟುಂಬದ ಆದ್ಯತೆಗಳಿಗೆ ಮೌಲ್ಯ ನೀಡುವುದು, ಕುಟುಂಬವನ್ನು ಸಂದರ್ಶಿಸುವುದರಲ್ಲಿ ನಿರಾತಂಕ, ದೈನಂದಿನ ನಿಯತಕಾರ್ಯಗಳು ಮತ್ತು ಚಟುವಟಿಕೆಗಳ ಬಗೆಗಿನ ಮಾಹಿತಿಯನ್ನು ಸ್ಪಷ್ಟಪಡಿಸಿಕೊಳ್ಳಲು ಹೇಗೆ ವಿಚಾರಿಸಬೇಕು ಎಂಬ ತಿಳಿವು, ಅನೇಕ ಸನ್ನಿವೇಶಗಳು ಮತ್ತು ತಂಡದ ಸದಸ್ಯರುಗಳ ಮೂಲಕ ದತ್ತಾಂಶ ಸಂಗ್ರಹಿಸಲು ಹೇಗೆ ಅಧಿಕೃತಗೊಳಿಸಿದ ಮಾಪನ ಮತ್ತು ಅವಲೋಕನ ನಡೆಸಬೇಕು ಎನ್ನುವ ಜ್ಞಾನ. ವ್ಯ-ಕು-ಸೇ ತಂಡ, ಮಕ್ಕಳು ತಮಗೆ ಮತ್ತು ಕುಟುಂಬಕ್ಕೆ ಆಸಕ್ತಿದಾಯಕವಾದ ಸಹಜವಾಗಿಯೇ ನಡೆಯುತ್ತಿರುವ ಚಟುವಟಿಕೆಗಳಲ್ಲಿ ಭಾಗವಹಿಸಿದಾಗ ಉತ್ತಮವಾಗಿ ಕಲಿಯುತ್ತಾರೆ ಎಂದು ಅರ್ಥಮಾಡಿಕೊಳ್ಳಬೇಕು ಮತ್ತು ನಂಬಬೇಕು.

**(ಕೆಳಗಿನಿಂದ ಅನುವಾದ ಮುಂದುವರಿದಿದೆ)**

### ಸೇವಾಪೂರ್ವ ಹಂತದ ಫಲಿತಾಂಶಗಳು/ತಂತ್ರಗಳು

- ತಂತ್ರಗಳನ್ನು ಅಭಿವೃದ್ಧಿಪಡಿಸಿ; ಮತ್ತು
- ಈ ಫಲಿತಾಂಶಗಳನ್ನು ಪಡೆಯಲು ಅಗತ್ಯ ಎಂದು ತೋರುವ ಸೇವೆಗಳು ಮತ್ತು ಬೆಂಬಲಗಳನ್ನು ಗುರುತಿಸಿ

(ಡನ್ಸ್ಟ & ಬ್ರೂಡರ್, 1999; ಡನ್ಸ್ಟ, ಬ್ರೂಡರ್, ಟ್ರಿವೆಟ್ಟೆ, ಹ್ಯಾಂಬಿ, ರಾಬ್ & ಮೆಕ್ಲೀನ್, 2001; ಡನ್ಸ್ಟ, ಬ್ರೂಡರ್, ಟ್ರಿವೆಟ್ಟೆ, ರಾಬ್ & ಮೆಕ್ಲಿನ್, 2001; ಡನ್ಸ್ಟ, ಹ್ಯಾಂಬಿ, ಟ್ರಿವೆಟ್ಟೆ, ರಾಬ್ & ಬ್ರೂಡರ್, 2002)

ಉತ್ತಮ ಗುಣಮಟ್ಟದ, ಕ್ರಿಯಾತ್ಮಕ ಫಲಿತಾಂಶಗಳು ಈ ಕೆಳಗಿನ ಅಂಶಗಳನ್ನು ಒಳಗೊಂಡಿರುತ್ತವೆ. ಪ್ರತಿ ಘಟಕದ ವ್ಯಾಖ್ಯಾನ, ತಾರ್ಕಿಕ ವಿವರಣೆ ಮತ್ತು ಉದಾಹರಣೆಗಳಿಗಾಗಿ ಈ ಲೇಖನದೊಂದಿಗೆ ಲಗತ್ತಿಸಲಾದ ವಿಭಾಗ 'ಎ' ಯನ್ನು ನೋಡಿ.

• ಅಗತ್ಯ/ಕಾಯಾತ್ಮಕ

• ನಿಜ ಜೀವನ ಸನ್ನಿವೇಶದ ಹಿನ್ನೆಲೆ

• ಶಿಸ್ತು-ಮುಕ್ತ

• ಪಾರಿಭಾಷಿಕ ಪದ-ಮುಕ್ತ

• ಧನಾತ್ಮಕ

• ಸಕ್ರಿಯ

• ಸಂಬಂಧಗಳ ಹಿನ್ನೆಲೆಯಲ್ಲಿ

ಕೆಳಗೆ ನೀಡಿರುವ ಕೋಷ್ಟಕ - 3 ಶಿಶು-ಕೇಂದ್ರಿತ ಐಎಫ್ಎಸ್‌ಪಿ (IFSP) ಫಲಿತಾಂಶಗಳನ್ನು ಪಟ್ಟಿ ಮಾಡುತ್ತದೆ ಮತ್ತು ಪ್ರತಿ ಫಲಿತಾಂಶವು ಭಾಗವಹಿಸುವಿಕೆ-ಆಧಾರಿತವಾಗಿದೆಯೇ ಇಲ್ಲವೇ ಮತ್ತು ಉತ್ತಮ ಗುಣಮಟ್ಟದ ಮಾನದಂಡಗಳನ್ನು ಪೂರೈಸುತ್ತದೆಯೇ ಎಂಬುದನ್ನು ವಿವರಿಸುತ್ತದೆ. ಉತ್ತಮ ಗುಣಮಟ್ಟದ ಉದಾಹರಣೆಗಳು ಪ್ರತಿ ಕಾಲಮ್‌ನಲ್ಲಿ ಚೆಕ್ (✓)ಚಿಹ್ನೆಯನ್ನು ಹೊಂದಿವೆ. ಪೂರೈಕೆದಾರರು ತಮ್ಮ ಐಎಫ್ಎಸ್‌ಪಿ (IFSP) ಗಳಲ್ಲಿ ಫಲಿತಾಂಶಗಳನ್ನು ರೇಟ್ ಮಾಡಲು ಲಗತ್ತು B ನಲ್ಲಿ ನೀಡಲಾದ ಕಾರ್ಯಹಾಳೆ/ವರ್ಕ್‌ಶೀಟ್ ಅನ್ನು ಬಳಸಬಹುದು.

**ಕೋಷ್ಟಕ 3: ಶಿಶು-ಕೇಂದ್ರಿತ ಐಎಫ್ಎಸ್‌ಪಿ (IFSP)**
**ಫಲಿತಾಂಶಗಳ ಮಾದರಿ**

| **ಐಎಫ್ಎಸ್‌ಪಿ (IFSP) ಫಲಿತಾಂಶಗಳ ಮಾದರಿ** | **ಇದು ಭಾಗವಹಿಸುವಿಕೆ ಆಧಾರಿತವೇ ಮತ್ತು ಗುಣಮಟ್ಟ ಉತ್ತಮವಾಗಿದೆಯೇ?** | | | | | | |
|---|---|---|---|---|---|---|---|
| | ಅಗತ್ಯ/ಕ್ರಿಯಾತ್ಮಕ | ನಿಜಜೀವನ ಸನ್ನಿವೇಶದ ಹಿನ್ನೆಲೆಯಲ್ಲಿ | ಶಿಸ್ತು ಮುಕ್ತ | ಪರಿಭಾಷಿಕ ಪದ ಮುಕ್ತ | ಧನಾತ್ಮಕ | ಸಕ್ರಿಯ | ಸಂಬಂಧಗಳ ಹಿನ್ನೆಲೆಯಲ್ಲಿ |
| ಲಿಲ್ಲಿ ತನ್ನ ಕುಟುಂಬದೊಂದಿಗೆ ಮೀನುಹಿಡಿಯಲು ಹೋಗುತ್ತಾಳೆ ಮತ್ತು ಗಾಳವನ್ನು ತಾನೇ ಹಿಡಿದುಕೊಳ್ಳುತ್ತಾಳೆ. | ✓ | ✓ | ✓ | ✓ | ✓ | ✓ | ✓ |
| ಡೇವಿಡ್ ಈಗ ಹೆಚ್ಚು ಮಾತನಾಡುತ್ತಾನೆ ಮತ್ತು ಅವನ ಪದಗಳ ಉಚ್ಚಾರಣೆ ಸುಧಾರಿಸಿದೆ | ✓ | | | ✓ | ✓ | ✓ | |
| ರಾಫೆಲ್ ಅಜ್ಜಿಯನ್ನು ನೋಡಲು ಹೋಗುವಾಗ ಆಕೆಯ ಮನೆಯವರೆಗೆ ಕಾರಿನಲ್ಲಿ ತನ್ನ ಸೀಟಿನಲ್ಲೇ ಕುಳಿತಿರುತ್ತಾನೆ** | ✓ | ✓ | ✓ | ✓ | ✓ | ✓ | ✓ |
| ಅವಾ ತನ್ನ ಆಟಿಕೆಗಳೊಂದಿಗೆ ಒಬ್ಬಳೆ ಆಡುತ್ತಿರುತ್ತಾಳೆ ಹೀಗಾಗಿ ಆಕೆಯ ಅಜ್ಜಿಗೆ ತಿಂಡಿಯನ್ನು ಮಾಡಿ ದೊಡ್ಡ ಮಕ್ಕಳನ್ನು ಶಾಲೆಗೆ ಬಿಟ್ಟು ಬರಲು ಸಾಧ್ಯವಾಗುತ್ತದೆ. | ✓ | ✓ | ✓ | ✓ | ✓ | ✓ | ✓ |
| ಎಂಜಲ್ ಒಬ್ಬರೊಡನೆ ಒಬ್ಬರು ಪ್ರತಿಕ್ರಿಯಿಸುವಾಗ, ಸರದಿ ಪ್ರಕಾರ ಭಾಗವಹಿಸುತ್ತಾಳೆ..$ | | | ✓ | | ✓ | | |

| | | | | | | | |
|---|---|---|---|---|---|---|---|
| . ಕಾಲ್ವಿನ್ ತನ್ನ ಸಹೋದರನೊಂದಿಗೆ ಆಡುತ್ತಾ ಸಂಜ್ಞೆಗಳ ಮತ್ತು ಪದಗಳ  ಮೂಲಕ ಅಭಿವ್ಯಕ್ತಿಸುತ್ತಾನೆ | ✓ | ✓ | ✓ | ✓ | ✓ | ✓ | ✓ |
| ಇಸಿಯಾ ಐದರಲ್ಲಿ ನಾಲ್ಕು ಬಾರಿ  ನಿದ್ರೆಯನ್ನು ಉತ್ತಮಗೊಳಿಸಿಕೊಂಡಿದ್ದಾನೆ. | ✓ | | ✓ | | ✓ | | |

| | | | | | | | |
|---|---|---|---|---|---|---|---|
| ನಟಾಲಿಯಾ ರಾತ್ರಿ ಇಡೀ ನಿದ್ರಿಸುತ್ತಾಳೆ | ✓ | ✓ | ✓ | ✓ | ✓ | ✓ | |
| ಮಾರ್ಕಸ್ ಒಟ್ಟು ನಾಲ್ಕು ಬ್ಲಾಕ್‌ಗಳನ್ನು ಜೋಡಿಸುತ್ತಾನೆ. | | | ✓ | ✓ | ✓ | ✓ | |
| ಆಯಿಷಾ ಕ್ರಮೇಣ ಶಿಶು ಆಹಾರ ತಿನ್ನುವುದನ್ನು ನಿಲ್ಲಿಸಿ ಹೆಚ್ಚು ಹೆಚ್ಚು ಗಟ್ಟಿ ಪದಾರ್ಥ ತಿನ್ನಲು ಆರಂಭಿಸಿದ್ದಾಳೆ. | ✓ | | ✓ | ✓ | | ✓ | |
| ವಾಕರ್ ಗ್ರಂಥಾಲಯದಲ್ಲಿ ಕಥಾಸಮಯದಲ್ಲಿ ಸ್ನೇಹಿತರನ್ನು ಸ್ವಾಗತಿಸುತ್ತಾನೆ. | ✓ | ✓ | ✓ | ✓ | ✓ | ✓ | ✓ |
| ಫು ಸಾಕಷ್ಟು ಆಹಾರವನ್ನು ತಿನ್ನುತ್ತ ತೂಕವನ್ನು ಹೆಚ್ಚಿಸಿಕೊಳ್ಳುತ್ತಿದ್ದಾನೆ ಹೀಗಾಗಿ ಅವನು ಶಸ್ತ್ರಚಿಕಿತ್ಸೆಗೆ ಒಳಗಾಗುವ ಅಗತ್ಯವಿಲ್ಲ. | ✓ | ✓ | ✓ | ✓ | ✓ | ✓ | |
| ಲೈಲಾಳನ್ನು ಬೇರ್ಪಡಿಸಿದಾಗ ರಚ್ಚೆ ಹಿಡಿಯುವುದನ್ನು ನಿಲ್ಲಿಸಿದ್ದಾಳ | ✓ | | ✓ | | | ✓ | |
| ಜೇಡನ್ ಅಳದೆ ಹತ್ತು ನಿಮಿಷಗಳು ಬೋರಲಾಗಿ ಮಲಗುವುದನ್ನು ಸಹಿಸಿಕೊಳ್ಳುತ್ತಾನೆ | | | ✓ | ✓ | ✓ | | |
| . ಎಥಾನ್‌ನನ್ನು ಚೈಲ್ಡ್‌ಕೇರ್ ಸೆಂಟರ್‌ನಲ್ಲಿ ಬಿಟ್ಟರೆ ತನ್ನಷ್ಟಕ್ಕೆ ತಾನೇ ಸಮಾಧಾನಕರವಾಗಿ, ಶಾಂತವಾಗಿ ಇರಬಲ್ಲ. | ✓ | ✓ | ✓ | ✓ | ✓ | ✓ | |

(ತಪ್ಪು ಅನುವಾದ. ** ಮಗು ಕಾರು ಚಲಾಯಿಸುವುದಿಲ್ಲ !! ಮಕ್ಕಳಿಗೆಂದು  ಕಾರಿನಲ್ಲಿ ಇರುವ ವಿಶಿಷ್ಟ ಸೀಟಿನಲ್ಲಿ ಮಕ್ಕಳು ಕುಳಿತಿರುತ್ತಾರೆ !

$ ಮಕ್ಕಳಿಗೆ ಸರದಿ ಪ್ರಕಾರ ಮಾತನಾಡಲು, ಆಡಲು ಕಲಿಸಲಾಗುತ್ತದೆ. ಎಂದರೆ ಅವರು ತಮ್ಮ ಸರದಿ ಬರುವವರೆಗೂ ತಾಳ್ಮೆಯಿಂದ ಬೇರೆಯವರಿಗೆ ಸಮಯ, ಅವಕಾಶ ಕೊಡುವುದನ್ನು ಕಲಿಸಲಾಗುತ್ತದೆ.)

## ವ್ಯ-ಕು-ಸೇ ಯನ್ನು ಮುಕ್ತಾಯಗೊಳಿಸುವುದು

ಶಿಶುಗಳು ಮತ್ತು ಅಂಬೆಗಾಲಿಡುವವರಿಗೆ ಆರಂಭಿಕ ಬೆಂಬಲ (ESIT) ದ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ವಿಭಾಗ IV ನೋಡಿ ಐಎಫ್‌ಎಸ್‌ಪಿ (IFSP) ಮುಕ್ತಾಯಗೊಳಿಸಲು ಹೆಚ್ಚಿನ ಮಾಹಿತಿಗಾಗಿ ಐಎಫ್‌ಎಸ್‌ಪಿ (IFSP) ಪ್ರಕ್ರಿಯೆ ಮತ್ತು ಮಾಹಿತಿ ಮಾರ್ಗದರ್ಶಿಯನ್ನು ನೋಡಿ.
https://www.dcyf.wa.gov/sites/default/files/pdf/esit/IFSP_Resource_Guide.pdf

ಫಲಿತಾಂಶದ ಹೇಳಿಕೆಯನ್ನು ನಿರ್ಧರಿಸಿದ ನಂತರ,ವ್ಯ-ಕು-ಸೇ ತಂಡ ಈ ಕೆಳಗಿನ ವಿಷಯಗಳನ್ನು ಪೂರ್ಣಗೊಳಿಸುತ್ತದೆ:

ಪ್ರಸ್ತುತ ಏನು ನಡೆಯುತ್ತಿದೆ?

- ಫಲಿತಾಂಶಗಳನ್ನು ಸ್ಪಷ್ಟಪಡಿಸಿ  ಮಧ್ಯಸ್ಥಿಕೆ ಯೋಜನೆಗೆ ಮಾರ್ಗದರ್ಶನ ನೀಡುತ್ತದೆ; ಮತ್ತು
- ಇದು ಹಿಂದಿನ ಮಾಹಿತಿಯ ಸಾರಾಂಶವಾಗಿರುತ್ತದೆ,

ಇದು ಮಗುವಿಗೆ ಏನು ಮಾಡಲು ಸಾಧ್ಯವಾಗುತ್ತಿದೆ ಮತ್ತು ಪೋಷಕರು ಮತ್ತು ಇತರ ಆರೈಕೆದಾರರು ಹೇಳಿರುವ ಫಲಿತಾಂಶಕ್ಕೆ ಸಂಬಂಧಿಸಿದಂತೆ ಏನು ಮಾಡುತ್ತಿದ್ದಾರೆ ಎಂಬುದನ್ನು ಒಳಗೊಂಡಿರಬೇಕು. ಈ ವಿಭಾಗವು ಮಗು ಮತ್ತು ಕುಟುಂಬದ ಸಾಮರ್ಥ್ಯಗಳು ಮತ್ತು ಫಲಿತಾಂಶಕ್ಕೆ ಸಂಬಂಧಿಸಿದಂತೆ ಪ್ರಸಕ್ತ ಕೌಶಲ್ಯಗಳು ಮತ್ತು ವರ್ತನೆಗಳನ್ನು ಒಳಗೊಂಡಿರಬೇಕು.

**ತಂಡದ ತಂತ್ರಗಳು ಮತ್ತು ವಿಧಾನಗಳು**

ತಂತ್ರಗಳು ಮತ್ತು ವಿಧಾನಗಳು ಈ ಫಲಿತಾಂಶವನ್ನು ಸಾಧಿಸುವ ನಿಟ್ಟಿನಲ್ಲಿ ಕುಟುಂಬ ಮತ್ತು ತಂಡವು ಹೇಗೆ ಕಾರ್ಯ ನಿರ್ವಹಿಸುತ್ತದೆ ಎಂಬುದನ್ನು ವಿವರಿಸುತ್ತವೆ. ಪೂರೈಕೆದಾರರು, ಪೋಷಕರು ಮತ್ತು ತಂಡದ ಇತರ ಸದಸ್ಯರಲ್ಲಿ ಯಾರು ಸಹಾಯ ಮಾಡಬಲ್ಲರು ಮತ್ತು ಅವರು ಏನು ಸಹಾಯ ಮಾಡಬಲ್ಲರು ಎಂಬಿತ್ಯಾದಿಯಾಗಿ ಅವರು ನಿರ್ವಹಿಸಬಹುದಾದ ಪಾತ್ರಗಳನ್ನು ವಿವರಿಸುತ್ತದೆ.

ತಂತ್ರಗಳು ಮತ್ತು ವಿಧಾನಗಳು:
• ಫಲಿತಾಂಶವನ್ನು ಸಾಧಿಸಲು ಸಹಕರಿಸುತ್ತವೆ
• ಕಾರ್ಯಕಾರಿ ಶಿಶು ಮಾಪನ ಫಲಿತಂಶಗಳಿಗೆ ಹೊಂದಿಸಲಾಗಿರುತ್ತದೆ.

• ಇದು ಎಲ್ಲಾ ಮಕ್ಕಳು ದೈನಂದಿನ ಜೀವನದಲ್ಲಿ, ಮನೆಯಲ್ಲಿ, ಆರಂಭಿಕ ಆರೈಕೆ ಮತ್ತು ಶೈಕ್ಷಣಿಕ ವಲಯದಲ್ಲಿ ಮತ್ತು ಸಮುದಾಯದಲ್ಲಿ ಹೇಗೆ ಕಲಿಯುತ್ತಾರೆ ಎಂಬುದರ ಮೇಲೆ ಆಧಾರಿತವಾಗಿದೆ;
• ವಿಕಾಸಾತ್ಮಕವಾಗಿ ಸೂಕ್ತವಾಗಿವೆ.;
• ಸಹಜವಾಗಿ ನಡೆಯುವ ಕಲಿಕಾ ಅವಕಾಶಗಳ ಮೇಲೆ ಗಮನವನ್ನು ಕೇಂದ್ರೀಕರಿಸುತ್ತದೆ;
• ಮಗುವಿನ ಸಾಮರ್ಥ್ಯ ಮತ್ತು ವಿಕಾಸವನ್ನು ಬಲಪಡಿಸುವ ಮತ್ತು ಪ್ರೋತ್ಸಾಹಿಸುವ ದೈನಂದಿನ ಕಲಿಕೆಯ ಅನುಭವಗಳು ಮತ್ತು ಅವಕಾಶಗಳನ್ನು ಮಕ್ಕಳಿಗೆ ಒದಗಿಸಲು ಪ್ರಾಥಮಿಕ ಆರೈಕೆದಾರರನ್ನು ಬೆಂಬಲಿಸುತ್ತವೆ ಮತ್ತು
•. ಮಗು ಮತ್ತು ಕುಟುಂಬಕ್ಕೆ ಅತಿಹೆಚ್ಚು ಮಟ್ಟದ ಆಸಕ್ತಿ ಮತ್ತು ಭಾಗವಹಿಸುವಿಕೆ ಇರುವ ಚಟುವಟಿಕೆಗಳ ಹಿನ್ನೆಲೆಯಲ್ಲಿ ಆಗುವ ಕಲಿಕೆಯನ್ನು ಬೆಂಬಲಿಸುತ್ತವೆ.

*ನಾವು ಪ್ರಗತಿ ಹೊಂದಿದ್ದೇವೆ ಎಂದು ನಮಗೆ ಹೇಗೆ ತಿಳಿಯುತ್ತದೆ?*

ಇದು . ತಂಡಕ್ಕೆ ಪ್ರಗತಿಯನ್ನು ಸೂಚಿಲು ನಿರ್ಧಾರಕ ಮತ್ತು ತಂಡ ಪ್ರಗತಿ ಹಾಗೂ ಒಂದು ವಾಸ್ತವ ಕಾಲಾವಧಿಯನ್ನು ನಿರ್ಧರಿಸಲು ಬಳಸುವ ವಿಧಾನಗಳನ್ನು ಒಳಗೊಂಡಿರುತ್ತದೆ. ಶೇಕಡಾ 75 ರಷ್ಟು ಸಮಯ" ಅಥವಾ "4 ರಲ್ಲಿ 3 ಪ್ರಯತ್ನಗಳು ಮುಂತಾದ ಹೆಚ್ಚು ನೈದಾನಿಕ ಪದಗಳು ಈ ವಿಭಾಗದಲ್ಲಿ ಸೇರಿಸಿರುವುದು ಸ್ವೀಕಾರಾರ್ಹವಾಗಿದೆ. ಹೆಚ್ಚಿನ ಉದಾಹರಣೆಗಳಿಗಾಗಿ ಈ ಕೆಳಗೆ ಲಗತ್ತಿಸಿರುವ ವಿಭಾಗ 'ಸಿ' ನೋಡಿ

**ಕಾರ್ಯಕಾರಿ ವ್ಯ.ಕು.ಸೇ ಫಲಿತಾಂಶಗಳನ್ನು ಸಾಧಿಸಲು ಅಗತ್ಯವಿರುವ ಸೇವೆಗಳು**

ಫಲಿತಾಂಶಗಳನ್ನು ನಿರ್ಧರಿಸಿದ ನಂತರವೇ ಆ ಫಲಿತಾಂಶಗಳನ್ನು ಪಡೆಯಲು ಅಗತ್ಯವಿರುವ ಸೇವೆಗಳು ಮತ್ತು ಸಹಾಯಗಳ ಬಗ್ಗೆ ನಿರ್ಧಾರಗಳನ್ನು ತೆಗೆದುಕೊಳ್ಳಬೇಕು. **ವ್ಯ.ಕು.ಸೇ** ಸಮಯ, ಅವಧಿ, ಆವೃತಿ, ತೀವ್ರತೆ ಮತ್ತು ಪ್ರತಿ ಸೇವೆಯನ್ನು ತಲುಪಿಸುವ ವಿಧಾನವನ್ನು ಒಳಗೊಂಡಿರಬೇಕು. ಆ ನಿರ್ಧಾರಗಳು ಕುಟುಂಬ/ಪಾಲಕರಿಗೆ ದೈನಂದಿನ ದಿನಚರಿ, ಚಟುವಟಿಕೆಗಳಲ್ಲಿ, ಮನೆಯಲ್ಲಿ, ಸಮುದಾಯ ವ್ಯವಸ್ಥೆಯಲ್ಲಿ ಮತ್ತು ಪ್ರಿಸ್ಕೂಲ್‌ನಲ್ಲಿ ಸ್ವಾಭಾವಿಕವಾಗಿ ದೊರಕುವ ಕಲಿಕೆಯ ಅವಕಾಶಗಳನ್ನು ಯಶಸ್ವಿಯಾಗಿ ಬಳಸಲು ಯಾವ ಪ್ರಮಾಣದಲ್ಲಿ ಬೆಂಬಲದ ಅಗತ್ಯವಿದೆ ಎಂಬುದನ್ನು ಆಧರಿಸಿರಬೇಕು (ಜಂಗ್, 2003; ಡನ್ಸ್ಟ್, 2004).

• ಆವೃತಿ ಮತ್ತು ತೀವ್ರತೆ ಎಂದರೆ ಸೇವೆಯನ್ನು ಒದಗಿಸುವ ದಿನಗಳು ಅಥವಾ ಅವಧಿಗಳ ಸಂಖ್ಯೆ ಮತ್ತು ಸೇವೆಯನ್ನು ವೈಯಕ್ತಿಕವಾಗಿ ಅಥವಾ ನಿರ್ದಿಷ್ಟ ಗುಂಪಿಗೆ ಒದಗಿಸಲಾಗಿದೆಯೇ ಎಂಬುದನ್ನು ಪರಿಶೀಲಿಸುವುದು;

• ವಿಧಾನ ಎಂದರೆ ಸೇವೆಯನ್ನು ಹೇಗೆ ಒದಗಿಸಲಾಗುತ್ತದೆ (ವಾಷಿಂಗ್ಟನ್‌ನ ವ್ಯಾಖ್ಯಾನಿಸಿದ ವಿಧಾನಗಳಿಗಾಗಿ ESIT IFSP ಪ್ರಕ್ರಿಯೆ ಮತ್ತು ಸಂಪನ್ಮೂಲ ಮಾರ್ಗದರ್ಶಿಯನ್ನು ನೋಡಿ);

• ಕಾಲಾವಧಿ ಎಂದರೆ ಪ್ರತಿ ಅಧಿವೇಶನದಲ್ಲಿ ಸೇವೆಯನ್ನು ಒದಗಿಸುವ ಸಮಯದ ಕಾಲಾವಧಿ; ಮತ್ತು
• ಅವಧಿ ಎಂದರೆ ಎಷ್ಟು ಸಮಯದವರೆಗೆ ಸೇವೆಯನ್ನು ಒದಗಿಸಲಾಗುವುದು (ಪ್ರಾರಂಭ ಮತ್ತು ಅಂತಿಮ ದಿನಾಂಕಗಳು).

## Resources


Rush, D., and Shelden, M. (2009). Tips and Techniques for Developing Participation-Based IFSP Outcome Statements. *BriefCASE, 2(1).* http://fipp.org/static/media/uploads/briefcase/briefcase_vol2_no1.pdf

McWilliam, R. (2006). Steps to Build a Functional Outcome. https://marylandlearninglinks.org/wp-content/uploads/2016/03/Steps_to_Build_a_Functional_Child_Outcome.pdf

ECTA Center. IFSP Process: Planning and Implementing Family Centered Services in Natural Environments. http://ectacenter.org/topics/ifsp/ifspprocess.asp

ECTA Center. Developing High-Quality, Functional IFSP Outcomes and IEP Goals: Training Package. Retrieved from http://ectacenter.org/knowledgepath/ifspoutcomes-iepgoals/ifspoutcomes-iepgoals.asp

ECTA Center. Resources for Writing Good IFSP Outcomes. http://ectacenter.org/topics/ifsp/ifsp.asp

Gillaspy, K., Lucas, A., Peters, M., and Hurth, J. (2014). Enhancing Recognition of High Quality, Functional IFSP Outcomes: A training activity for infant and toddler service providers. Retrieved from http://ectacenter.org/~pdfs/pubs/rating-ifsp.pdf

# ಲಗತ್ತು ಎ: ಉತ್ತಮ ಗುಣಮಟ್ಟದ, ಕಾರ್ಯಸಮರ್ಥ ಫಲಿತಾಂಶದ ಘಟಕಗಳು

| ಘಟಕ | ಏನು | ಯಾಕೆ | ಹೀಗೆ ಕಾಣುತ್ತದೆ | ಹೀಗೆ ಕಾಣುವುದಿಲ್ಲ | ಕುಟುಂಬಕ್ಕೆ ಸಲಹೆ ಮತ್ತು ಪ್ರಶ್ನೆಗಳು |
|---|---|---|---|---|---|
| ಆವಶ್ಯಕ / ಕಾರ್ಯಕಾರಿ | ಇದರರ್ಥ ಫಲಿತಾಂಶವು .* ಮಗು ಮತ್ತು ಕುಟುಂಬಕ್ಕೆ ಮುಖ್ಯವಾದ ಸಾಮುದಾಯಿಕ ಜೀವನ ಮತ್ತು ಕೌಟುಂಬಿಕ ಚಟುವಟಿಕೆಗಳನ್ನು ಬೆಂಬಲಿಸುವ ಮಾರ್ಗಗಳ ಮೇಲೆ ಗಮನವಿಡುತ್ತದೆ. ಇದು ಕುಟುಂಬ ಆಯ್ಕೆಮಾಡಿದ ಚಟುವಟಿಕೆಗಳಲ್ಲಿ ಭಾಗವಹಿಸುವಿಕೆಯನ್ನು ಉತ್ತಮಗೊಳಿಸಬೇಕೇ ವಿನಹಾ ಸೇವೆ ನೀಡುವವರು ಏನನ್ನು ಅವಶ್ಯಕ ಮತ್ತು ಕಾರ್ಯಕಾರಿ ಎಂದು ಭಾವಿಸುತ್ತಾರೋ ಅದನ್ನು ಆಧರಿಸಿರಬಾರದು. | ಫಲಿತಾಂಶಗಳು ಕುಟುಂಬಕ್ಕೆ ಅಗತ್ಯವಾದುದು ಮತ್ತು ಕ್ರಿಯಾತ್ಮಕವಾದುದು ಆಗಿದ್ದರೆ ಅವು ಕುಟುಂಬಕ್ಕೆ ಹೆಚ್ಚು ಅರ್ಥಪೂರ್ಣವಾಗುತ್ತವೆ ತಮ್ಮ ಆದ್ಯತೆಗಳನ್ನು ಆಧರಿಸಿದ ತಂತ್ರಗಳನ್ನು ಕುಟುಂಬಗಳು ಬಳಸುವ ಸಾಧ್ಯತೆ ಹೆಚ್ಚು. | ಬ್ರಾಡಿ ಬೆಳಿಗ್ಗೆ ಮತ್ತು ಸಂಜೆ ತನ್ನ ತಾಯಿಯೊಂದಿಗೆ ಆಡುವ ಸಮಯದಲ್ಲಿ ಆಟಿಕೆ ಪಡೆಯಲು ತನ್ನ ತಾಯಿಯ ಮಡಿಲಿಂದ ಇಳಿದು ಆಟಿಕೆಯ ಪೆಟ್ಟಿಗೆಯ ಕಡೆಗೆ ತೆವಳಿಕೊಂಡು ಹೋಗುತ್ತಾನೆ<br><br>ನಿಕೋನ ಪಾಲಕರು ಅವನು ಸಮವಯಸ್ಕರೊಂದಿಗೆ ಆಡುವುದನ್ನು ಹೇಗೆ ಬೆಂಬಲಿಸಬೇಕು ಎನ್ನುವುದನ್ನು ಶಿಶು ಆರೈಕೆದಾರರೊಂದಿಗೆ, ಚರ್ಚಿಸಲು ವಿಶ್ವಾಸ ಹೊಂದಿರುತ್ತಾರೆ. | ಬ್ರಾಡಿ ಉರುಳುತ್ತಾನೆ, ಕುಳಿತುಕೊಳ್ಳುತ್ತಾನೆ, ಅಂಬೆಗಾಲಿಕ್ಕುತ್ತಾನೆ ಮತ್ತು ನಡೆಯುತ್ತಾನೆ.<br><br>ನಿಕೋ ಸಹಕಾರಾತ್ಮಕವಾಗಿ ಆಡುವ ವಿಕಾಸದ ಮುಂದಿನ ಮೈಲಿಗಲ್ಲನ್ನು ತಲುಪುತ್ತಾನೆ. | ಬದಲಾವಣೆಗಳು ಯಾವಾಗ ಹೆಚ್ಚು ಸಹಾಯಕ ಮತ್ತು ಗಮನಾರ್ಹವಾಗುತ್ತವೆ<br><br>ಮಗು ಹುಟ್ಟುವ ಮೊದಲು ನೀವು ಮಾಡುತ್ತಿದ್ದ ಮತ್ತು ಈಗ ಮತ್ತೆ ಮಾಡಬಯಸುವ ಯಾವುದಾದರೂ ಚಟುವಟಿಕೆಗಳಿವೆಯೇ? |
| ವಾಸ್ತವ ಜೀವನದ ಸಾಂದರ್ಭಿಕ ಸನ್ನಿವೇಶಗಳು | ಇದರರ್ಥ ಫಲಿತಾಂಶದ ಹೇಳಿಕೆಗಳು ಮಗು ಮತ್ತು ಕುಟುಂಬದ ದೈನಂದಿನ ಚಟುವಟಿಕೆಗಳ ಸನ್ನಿವೇಶ ಮತ್ತು ನಿಯತಕಾರ್ಯಗಳನ್ನು ಪ್ರತಿಬಿಂಬಿಸುತ್ತವೆ. ಇದು ಊಟದ ಸಮಯ, ಸ್ನಾನ ಮತ್ತು ಕಾರಿನಲ್ಲಿ ಸವಾರಿ, ಜೊತೆಗೆ ಕುಟುಂಬಕ್ಕೆ | ಇಲ್ಲಿ ಕೇಂದ್ರದಲ್ಲಿ ಕುಟುಂಬದ ನೈಜ-ಜೀವನದ ಸಂದರ್ಭವನ್ನು ಬಳಸಿಕೊಳ್ಳುವುದರಿಂದ ಕುಟುಂಬಗಳಿಗೆ ತಮ್ಮ ದೈನಂದಿನ ದಿನಚರಿಯಲ್ಲಿ ತಂತ್ರಗಳನ್ನು ಅಳವಡಿಸಿಕೊಳ್ಳುವುದು | ಐಡೆನ್ ಚಮಚ ಬಳಸಿ ಊಟಮಾಡುತ್ತಾನೆ<br>.<br>. | ಕುಟುಂಬವು ಐಡೆನ್ ತಟ್ಟೆಯಲ್ಲಿ ಆಹಾರ ಪದಾರ್ಥಗಳನ್ನು ಹಾಕಿಕೊಂಡು ತಿನ್ನುವುದನ್ನು ನೋಡಬಯಸುತ್ತದೆ | ನೀವು ಮತ್ತು ನಿಮ್ಮ ಮಗು ಯಾವ ರೀತಿಯ ವಿಷಯಗಳಲ್ಲಿ ಅಥವಾ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವುದನ್ನು ಇಷ್ಟಪಡುತ್ತೀರಿ (ಉದಾಹರಣೆಗೆ, ಚಾರಣ, ಅಡುಗೆ, ಪುಸ್ತಕಗಳನ್ನು ಓದುವುದು)? |

| | | | | | |
|---|---|---|---|---|---|
| | ವೈಯಕ್ತಿಕಗೊಳಿಸಲಾದ ನಿರ್ದಿಷ್ಟವಾದ ದಿನಚರಿ ಮತ್ತು ಚಟುವಟಿಕೆಗಳನ್ನು ಒಳಗೊಂಡಿರುತ್ತದೆ. ನಿರ್ದಿಷ್ಟವಾದ ಪ್ರತ್ಯೇಕ ಕೌಶಲ್ಯಗಳನ್ನು (ಉದಾಹರಣೆಗೆ, ಮೌಲ್ಯಮಾಪನದ ಸಮಯದಲ್ಲಿ ತಪ್ಪಿಸಿಕೊಂಡ ಪರೀಕ್ಷೆಯ ಘಟಕಗಳು) ನೈಜ ಜೀವನಕ್ಕೆ ಸಾಂದರ್ಭಿಕ ಎಂದು ಪರಿಗಣಿಸಲಾಗುವುದಿಲ್ಲ.* | ಸುಲಭವಾಗುತ್ತದೆ. | ವಾಕರ್‌ನ ಅವಳಿ ಮತ್ತು ಹಿರಿಯ ಸಹೋದರಿಯರು ಅವನೊಂದಿಗೆ ಬ್ಯಾಕ್ ಅಂಡ್ ಫೊರ್ತ್ ಆಟವನ್ನು ಆಡುವುದನ್ನು ಆನಂದಿಸುತ್ತಾರೆ. | | ಅದು ನಿಮ್ಮ ದೈನಂದಿನ ಜೀವನದಲ್ಲಿ ಯಾವ ರೀತಿಯ ವ್ಯತ್ಯಾಸವನ್ನು ತರುತ್ತದೆ ಅಥವಾ ನಿಮ್ಮ ದಿನದ ಬೇರೆ ಬೇರೆ ಸಮಯಗಳು ಇದರಿಂದಾಗಿ ಹೇಗೆ ಸುಲಭಗೊಳ್ಳುತ್ತವೆ? |
| ಶಿಸ್ತು-ಮುಕ್ತ | ಇದರರ್ಥ, ತಂಡದ ಯಾವುದೇ ಸದಸ್ಯರು ಗಮನನೀಡಬಹುದಾದಂತಹ ವಿವಿಧಕ್ಷೇತ್ರಗಳಲ್ಲಿ ಕೌಶಲ್ಯಗಳನ್ನು ಅಭಿವೃದ್ಧಿಗೊಳಿಸುವ ಮಕ್ಕಳ ನಿಯತಕಾರ್ಯಗಳಲ್ಲಿ ಮತ್ತು ದೈನಂದಿನ ಚಟುವಟಿಕೆಯಲ್ಲಿ ಭಾಗವಹಿಸುವಿಕೆಯನ್ನು ವರ್ಣಿಸಲು ಫಲಿತಾಂಶವನ್ನು ನಿರ್ಧರಿಸಲಾಗಿದೆ.<br><br>.<br>ಇದರ ಪ್ರಕಾರ ಫಲಿತಾಂಶಗಳನ್ನು ಬರೆದಿಡಬೇಕು ಆಗ ಮಗು ಮತ್ತು/ಅಥವಾ ಕುಟುಂಬದವರು, ಆಕ್ಯುಪೇಶನಲ್ ಥೆರಪಿಸ್ಟ್‌ಗಳು ಅಥವಾ ಆರಂಭಿಕ ಮಧ್ಯಪ್ರವೇಶಿಸುವ ವ್ಯಕ್ತಿಗಳ ಮೊದಲು ಈ ಬಗ್ಗೆ ಗಮನ ಹರಿಸಬಹುದು. | ಆರಂಭಿಕ ಹಂತದಲ್ಲಿ, ಸೇವಾ ಪೂರೈಕೆದಾರರು ಕುಟುಂಬಗಳ ಜೊತೆಗೆ ಅಂತರಶಿಸ್ತೀಯ ತಂಡದ ಭಾಗವಾಗಿ ಕೆಲಸ ಮಾಡುತ್ತಾರೆ. ಎಂದರೆ ತಂಡದ ಯಾವುದೇ ಸದಸ್ಯ ಗಮನಹರಿಸಲು ನಿರ್ದಿಷ್ಟವಾಗಿ ನಿಗದಿಪಡಿಸಿದ ಅಂಶವನ್ನು ಲೆಕ್ಕಿಸದೆ ಇತರ ಅಂಶಗಳೆಡೆಗೂ ಗಮನಹರಿಸಿ ಮಗುವಿನ ಬೆಳವಣಿಗೆಗೆ ಕೊಡುಗೆ ನೀಡಬಹುದು. | ಡೇವಿಸ್ ಊಟದ ಸಮಯದಲ್ಲಿ ತನಗೆ ತಿನ್ನಲು ಮತ್ತು ಕುಡಿಯಲು ಏನು ಬೇಕು ಎಂಬುದನ್ನು ಪದಗಳನ್ನು ಬಳಸಿ ತನ್ನ ಕುಟುಂಬದ ಸದಸ್ಯರಿಗೆ ತಿಳಿಸುತ್ತಾನೆ.<br><br>ಜೋನನ ಸಹೋದರ ಜೋಸಿಯ ಜೋನನಿಗೆ ಆಟಿಕೆಗಳನ್ನು ತೋರಿಸುತ್ತ ಅವನು ನಡೆಯುವುದನ್ನು ಪ್ರೋತ್ಸಾಹಿಸುತ್ತಾನೆ. | ಡೇವಿಸ್ ತುಂಬಾ ಮಾತನಾಡುತ್ತಾನೆ.ಜೊತೆಗೆ ಪದಗಳನ್ನೂ ಉತ್ತಮವಾಗಿ ಉಚ್ಚರಿಸುತ್ತಾನೆ.<br><br>ಜೋನಾ ಸ್ಥಿರವಾದ ಶೈಲಿಯಲ್ಲಿ ನಡೆಯುತ್ತಾನೆ. | ಉದ್ದೇಶಿತ ಫಲಿತಾಂಶವನ್ನು ಪಡೆಯುವ ಸಂದರ್ಭದಲ್ಲಿ ತಮ್ಮ ಪಾತ್ರ ಏನಾಗಿತ್ತು ಎಂಬುದನ್ನು ನೋಡಲು ಪೋಷಕರಿಗೆ ಸುಲಭವಾ ಗುತ್ತದೆ.<br><br>ನಾವು ಈಗ ಚರ್ಚಿಸುತ್ತಿರುವುದನ್ನು ನೀವು ಹೇಗೆ ವಿವರಿಸುತ್ತೀರಿ? |

| ಘಟಕಗಳು | ಏನು | ಯಾಕೆ | ಹೇಗೆ ಕಾಣುತ್ತದೆ | ಹೇಗೆ ಕಾಣುವುದಿಲ್ಲ | ಕುಟುಂಬಗಳಿಗೆ ಸೂಚನೆಗಳು ಮತ್ತು ಪ್ರಶ್ನೆಗಳು |
|---|---|---|---|---|---|
| ಪಾರಿಭಾಷಿಕ ಪದ ಮುಕ್ತ | ಇದರರ್ಥ ಫಲಿತಾಂಶವನ್ನು ಕುಟುಂಬದ ಸದಸ್ಯರಿಗೆ ಮತ್ತು ಸಾರ್ವಜನಿಕರಿಗೆ ಅರ್ಥವಾಗುವಂತೆ ಬರೆಯಲಾಗಿದೆ ಮತ್ತು ವೃತ್ತಿಪರ ಪರಿಭಾಷಿಕ ಪದಗಳು ಅಥವಾ ವೃತ್ತಿಪರರ "ವ್ಯಾಖ್ಯೆ" ಗಳನ್ನು ಇದು ಒಳಗೊಂಡಿರುವುದಿಲ್ಲ. | ಫಲಿತಾಂಶಗಳನ್ನು ಸ್ಪಷ್ಟ, ಸರಳ ಭಾಷೆಯಲ್ಲಿ ಬರೆದರೆ ತಂಡದ ಎಲ್ಲಾ ಸದಸ್ಯರು ಸುಲಭವಾಗಿ ಅರ್ಥಮಾಡಿಕೊಳ್ಳುವುದು ಸಾಧ್ಯವಾಗುತ್ತದೆ. | ಅಮಾನಿ ತಾಯಿಯೊಂದಿಗಿನ ಅವಳ ಬೆಳಗಿನ ಆಟದ ಸಮಯದಲ್ಲಿ ಆಟಿಕೆಯನ್ನು ಎತ್ತಿಕೊಂಡು ಹಿಡಿದುಕೊಳ್ಳುತ್ತಾಳೆ.<br><br>ಅವಳ ಅಮ್ಮ ಮೇರಿ ತನ್ನ ಮಗಳೊಂದಿಗೆ ಹಾಡುಗಳನ್ನು ಹಾಡುವುದು ಮತ್ತು ಆಡುವುದನ್ನು ಆನಂದಿಸುತ್ತಾರೆ | ಆಟಿಕೆಯನ್ನು ಎತ್ತಿಕೊಳ್ಳುವಾಗ ಅದನ್ನು ಕೇವಲ ಎರಡು ಬೆರಳಿನಲ್ಲಿ ಹಿಡಿದುಕೊಳ್ಳಲು ಅಮಾನಿ ಮಧ್ಯರೇಖೆಯನ್ನು ದಾಟುತ್ತಾಳೆ.<br><br>ಪ್ರತಿಯೊಬ್ಬರೊಂದಿಗೂ ಸುಗಮಗಾರಿಕೆಯ ಸಮಯದಲ್ಲಿ ಏಂಜೆಲ್ ಸಾಮಾಜಿಕ ಸಂವಹನದಲ್ಲಿ ತೊಡಗುತ್ತಾಳೆ. | ಕುಟುಂಬದ ತಿಳುವಳಿಕೆ ಅಥವಾ ಆದ್ಯತೆಯ ಪದಗಳಿಗೆ ಪರಿಶೀಲಿಸಿ.<br><br>ಈ ವಿಷಯದ ಬಗ್ಗೆ ನಿಮಗೆ ಎಷ್ಟು ಗೊತ್ತು? |
| ದನಾತ್ಮಕ | ಇದರರ್ಥ ಇಡೀ ಫಲಿತಾಂಶದ ಹೇಳಿಕೆಗಳು ಧನಾತ್ಮಕವಾಗಿ ಸಾಗುತ್ತಿರುತ್ತದೆ. ಮಗು ಮತ್ತು/ಅಥವಾ ಕುಟುಂಬವು ಏನು ಮಾಡಬಲ್ಲುದು ಎಂಬುದನ್ನು ಫಲಿತಾಂಶವು ಹೇಳುತ್ತದೆ, ಬದಲಿಗೆ ಅವರು ಏನು ಮಾಡುವುದಿಲ್ಲ ಅಥವಾ ಮಾಡುವುದನ್ನು ನಿಲ್ಲಿಸುತ್ತಾರೆ ಎಂದಲ್ಲ. ಹೇಳಿಕೆಯೊಳಗೆ ಯಾವುದೇ ನಕಾರಾತ್ಮಕ ಪದಗಳು ಕಂಡುಬಂದರೆ, ಅದು ಸಕಾರಾತ್ಮಕವಾಗಿರುವ ಫಲಿತಾಂಶವಲ್ಲ.* | ಧನಾತ್ಮಕ ಆಲೋಚನೆ ಕುಟುಂಬದ ಸದಸ್ಯರನ್ನು ತಮ್ಮ ಮಗುವಿನಲ್ಲಿ ನಾವು ಏನು ನೋಡಲು ಅಪೇಕ್ಷಿಸುತ್ತೇವೆ ಎಂಬುದನ್ನು ಗುರುತಿಸಲು ಸಹಾಯ ಮಾಡುತ್ತದೆ. ಸಾಮರ್ಥ್ಯ-ಆಧಾರಿತ ವಿಧಾನವು ಮಗು ಮತ್ತು ಕುಟುಂಬದ ಯೋಗಕ್ಷೇಮದ ಮೇಲೆ ಕೇಂದ್ರೀಕರಿಸಲು ಕಾರಣವಾಗುತ್ತದೆ. | ಮೈಲ್ಸ್ ತಾಯಿ ಅವನನ್ನು ಶಿಶುಪಾಲನಾ ಕೇಂದ್ರದಲ್ಲಿ ಬಿಟ್ಟಾಗ ಅವನಿಗೆ ಸಂತೋಷವೆನಿಸುತ್ತದೆ ಮತ್ತು ಅಲ್ಲಿಯೇ ಅವನು ವಿಶ್ರಾಂತಿ ಪಡೆಯುತ್ತಾನೆ.<br><br>ಲೆಟ್ಟಿಯ ಅಜ್ಜಿ, ಮಾರ್ಗರೈಟ್, ಹೊಸ ಬಗೆಯ ಮತ್ತು ಸುರಕ್ಷಿತವಾಗಿರುವ ಆಹಾರಗಳನ್ನು ಲೆಟ್ಟಿಗೆ ಮಾಡಿಕೊಡುತ್ತಾರೆ. | ಮೈಲ್ಸ್ ಅವನನ್ನು ಬಿಟ್ಟು ಹೋಗುವಾಗ ಹಟಮಾಡುವುದನ್ನು ಬಿಟ್ಟಿದ್ದಾನೆ.<br><br>ಲೆಟ್ಟಿ ಕ್ರಮೇಣ ಮಗುವಿನ ಆಹಾರವನ್ನು ತಿನ್ನುವುದನ್ನು ನಿಲ್ಲಿಸಿದ್ದಾನೆ ಮತ್ತು ತಿನ್ನುವಾಗ ಆಹಾರ ಬೇಡ ಎಂದು ಬಾಯಿ ಮುಚ್ಚಿಕೊಳ್ಳದೆ ಹೆಚ್ಚು ಹೆಚ್ಚು ಘನ ಆಹಾರವನ್ನು ಸೇವಿಸುತ್ತಾನೆ. | ನಿಮ್ಮ ಮಗುವನ್ನು ಸಂತೋಷಪಡಿಸುವುದು ಯಾವುದು ನಗುವುದೋ ಮತ್ತು/ಅಥವಾ ಮುಗುಳ್ನಗೆಯೋ<br><br>ನಿಮ್ಮ ಮಗುವಿನಲ್ಲಿ ಯಾವುದನ್ನು ನೀವು ಹೆಚ್ಚು ಹೆಚ್ಚು ನೋಡಲು ಬಯಸುತ್ತೀರಿ ಮತ್ತು ಅದನ್ನು ಆನಂದಿಸುತ್ತೀರಿ. |
| ಸಕ್ರಿಯ | ಇದರರ್ಥ ಮಗು ಮತ್ತು/ಅಥವಾ ಕುಟುಂಬದ ಸಕ್ರಿಯ ಭಾಗವಹಿಸುವಿಕೆ ಅಥವಾ ತೊಡಗುವಿಕೆಯನ್ನು ಪ್ರೋತ್ಸಾಹಿಸುವ ಪದಗಳನ್ನು ಬಳಸುವುದು. ಸಕ್ರಿಯ ಪದಗಳು ತಿನ್ನುವುದು, ಆಟವಾಡುವುದು, ಮಾತನಾಡುವುದು, ನಡೆಯುವುದು ಇತ್ಯಾದಿಗಳನ್ನು ಒಳಗೊಂಡಿರುತ್ತದೆ ಮತ್ತು ಮಗು ಅಥವಾ ಕುಟುಂಬವು ಏನು ಮಾಡುತ್ತಾರೆ ಎಂಬುದನ್ನು ಸೂಚಿಸುತ್ತದೆ. ನಿಷ್ಕ್ರಿಯ ಪದಗಳು ಸ್ಥಾಯಿ ಸ್ಥಿತಿಯನ್ನು ಪ್ರತಿಬಿಂಬಿಸುತ್ತವೆ (ಉದಾ., ಸಹಿಸಿಕೊಳ್ಳುವುದು ಮತ್ತು ಸ್ವೀಕರಿಸುವುದು), ಅಥವಾ ಕಾರ್ಯಕ್ಷಮತೆಯಲ್ಲಿ ಬದಲಾವಣೆ ಅಥವಾ ಬದಲಾವಣೆಯ ಕೊರತೆ ಸೂಚಿಸುತ್ತವೆ.(ಉದಾ., ಹೆಚ್ಚಿಸಿ, ಕಡಿಮೆ ಮಾಡಿ, ಸುಧಾರಿಸಿ ಮತ್ತು ನಿರ್ವಹಿಸಿ)* | ಇಲ್ಲಿ ಸೂಚಿಸಲಾಗಿರುವ ಸಕ್ರಿಯ ಪದಗಳನ್ನು ಬಳಸುವುದು ಮಗು ಮತ್ತು/ಅಥವಾ ಕುಟುಂಬದ ಸಕ್ರಿಯ ಭಾಗವಹಿಸುವಿಕೆ ಅಥವಾ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವಿಕೆಯನ್ನು ಉತ್ತೇಜಿಸುತ್ತದೆ ಮತ್ತು ಅರ್ಥಪೂರ್ಣ ಪ್ರಗತಿಯನ್ನು ಸಾಧಿಸಲು ಸಹಾಯ ಮಾಡುತ್ತದೆ. | ಮಿಗುಯೆಲ್ ರಾತ್ರಿಯೆಲ್ಲ ನಿದ್ರಿಸುತ್ತಾನೆ.<br>ಥಾಮಸ್ ರಾತ್ರಿ ಮಲಗುವಾಗ ಅವನಿಗೆ ಕಥೆಗಳನ್ನು ಹೇಳಲು ಥಾಮಸ್ ನ ತಾಯಿ, ಅಲಿಸಿಯಾ, ಕೂತುಕೊಳ್ಳುವ ಮೂರು ವಿಧಾನವನ್ನು ಅಭ್ಯಾಸಮಾಡಿಕೊಂಡಿದ್ದಾರೆ. | ಮಿಗುಯೆಲ್‌ನ ನಿದ್ರೆಯ ವಿಧಾನ ಸುಧಾರಿಸಿದ್ದು, 5 ದಿನಗಳ ಅವಧಿಯಲ್ಲಿ ಆತನ ನಿದ್ರೆಯನ್ನು ಗಮನಿಸಿದಾಗ 4 ದಿನಗಳಲ್ಲಿ ಆತನ ನಿದ್ರೆ ಸುಧಾರಿಸಿದೆ.<br>ಥಾಮಸ್ ಇತ್ತೀಚೆಗೆ ತಾನೊಬ್ಬನೆ ಸ್ವತಂತ್ರವಾಗಿ ಕುಳಿತುಕೊಳ್ಳುವುದನ್ನು ಸಹಿಸಬಲ್ಲ. | ಎಲ್ಲವೂ ಸರಿಯಾಗಿ ನಡೆಯುತ್ತಿದೆ ಎಂದಾದರೆ ಆ ಮಾದರಿ ಪರಿಸ್ಥಿತಿಯನ್ನು ವಿವರಿಸಿ.<br><br>ಆ ಸಮಯದಲ್ಲಿ ನೀವು, ನಿಮ್ಮ ಮಗು ಮತ್ತು ಇತರರು ಏನು ಮಾಡುತ್ತಿದ್ದಿರಿ? |

| | | | | | |
|---|---|---|---|---|---|
| ಸಂಬಂಧಗಳ ಹಿನ್ನೆಲೆಯಲ್ಲಿ | ಇದರರ್ಥ ಪ್ರತಿ ಫಲಿತಾಂಶವು ಸಂಬಂಧಗಳ ಸನ್ನಿವೇಶದ ಹಿನ್ನೆಲೆಯಲ್ಲಿ ಕೌಶಲ್ಯಗಳನ್ನು ತಿಳಿಸಬೇಕು. ಅದು ಪೋಷಕರು, ಶಿಶುಪಾಲಕರು, ಇತರ ಮಕ್ಕಳು ಅಥವಾ ಇತರ ಕುಟುಂಬದ ಸದಸ್ಯರು ಯಾರನ್ನೂ ಒಳಗೊಂಡಿರಬಹುದು. IFSP ಫಲಿತಾಂಶಗಳು ಸಾಮಾಜಿಕ-ಭಾವನಾತ್ಮಕ ಬೆಳವಣಿಗೆಯು ಇತರ ಎಲ್ಲಾ ರೀತಿಯ ಕಲಿಕೆಗೂ ಅಡಿಪಾಯವಾಗಿದೆ ಎಂಬ ಆರೈಕೆದಾರರ ನಂಬಿಕೆಯನ್ನು ದೃಢಪಡಿಸಬೇಕು. | ತಮ್ಮ ಜೀವನದ ಪ್ರಮುಖ ವ್ಯಕ್ತಿಗಳೊಂದಿಗೆ ಸಂವಹನ ನಡೆಸುವಾಗ ಮಕ್ಕಳಿಗೆ ಉತ್ತಮವಾಗಿ ಕಲಿಯಲು ಸಾಧ್ಯವಾಗುತ್ತದೆ. ಅಲ್ಲದೆ, ಇನ್ನೊಬ್ಬ ವ್ಯಕ್ತಿಯನ್ನು ಸೇರಿಸುವುದರಿಂದ ಪ್ರತಿ ಐಎಫ್ಎಸ್‌ಪಿ (IFSP)ಫಲಿತಾಂಶದ ಮೂಲಕ ಮಗುವಿನ ಸಾಮಾಜಿಕ-ಭಾವನಾತ್ಮಕ ಬೆಳವಣಿಗೆಯನ್ನು ಬೆಂಬಲಿಸಲು ತಂಡಕ್ಕೆ ಅನುಮತಿಸಲಾಗುತ್ತದೆ. | ಲಿಲಿ ತನ್ನ ಕುಟುಂಬದೊಂದಿಗೆ ಮೀನು ಹಿಡಿಯಲು ಹೋಗುವಾಗ ಅವಳಿಗೆಂದೇ ಇರುವ ಗಾಳವನ್ನು ಹಿಡಿದುಕೊಂಡು ಹೋಗುತ್ತಾಳೆ. ಇಸಾಬೆಲ್ ಅವನ ತಾಯಿ ಲೈಬ್ರರಿಯ ಹಿಂಭಾಗದಲ್ಲಿ ಕೂತಿದ್ದರೆ ಲೈಬ್ರರಿಯಲ್ಲಿ ಕಥೆಯನ್ನು ಓದುವ ಸಮಯದಲ್ಲಿ ತನ್ನ ಸಹೋದರಿಯೊಂದಿಗೆ ಆರಾಮವಾಗಿ ಕುಳಿತುಕೊಳ್ಳುತ್ತಾನೆ. | ಲಿಲ್ಲಿ ಅವಳ ಮೀನಿನ ಗಾಳವನ್ನು ಸುಲಭವಾಗಿ ಹಿಡಿಯಬಲ್ಲಳು. ತಾಯಿ ಕೋಣೆಯ ಹಿಂಭಾಗದಲ್ಲಿ ಕೂತರೆ ಜೂಲಿಯಾ ಕಥೆ ಓದುವ ಸಮಯದಲ್ಲಿ ಲೈಬ್ರರಿಯಲ್ಲಿ ಆರಾಮವಾಗಿ ಕೂತುಕೊಳ್ಳುತ್ತಾಳೆ. | ಒಡಹುಟ್ಟಿದವರು ತಮ್ಮ ನಡುವೆ ಹೇಗೆ ಸಂವಹನ ನಡೆಸುತ್ತಾರೆ? ಫಲಿತಾಂಶಗಳು ಮತ್ತು ಕಾರ್ಯತಂತ್ರಗಳಲ್ಲಿ ಅವರನ್ನು ಹೇಗೆ ಸೇರಿಸಿಕೊಳ್ಳಬಹುದು?<br><br>ನಿಮ್ಮ ಮಗು ಯಾರೊಂದಿಗೆ ಚೆನ್ನಾಗಿ ಪ್ರತಿಕ್ರಿಯಿಸುತ್ತದೆ (ಅಪೇಕ್ಷಿತ ಫಲಿತಾಂಶಕ್ಕಾಗಿ ದಿನಚರಿಯನ್ನು ಹೆಸರಿಸಿ)? |

*(Shelden & Rush, 2009)



ಲಗತ್ತು ಬಿ: ಐಎಫ್ಎಸ್‌ಪಿ (IFSP) ಫಲಿತಾಂಶದ ಮೌಲ್ಯಮಾಪನ ಹಾಳೆ

ನಿಮ್ಮ ಕಾರ್ಯಕ್ರಮದ ಫಲಿತಾಂಶದ ಉದಾಹರಣೆಗಳನ್ನು ಬಳಸಿಕೊಂಡು, ಪ್ರತಿಯೊಂದು ಘಟಕದಲ್ಲೂ ನಿಮಗೆ ಸಾಧಿಸಲು ಸಾಧ್ಯವಾದ ಅಂಶಗಳನ್ನು ಈ ಕೆಳಗೆ ನೀಡಲಾಗಿರುವ ಚೌಕಗಳಲ್ಲಿ ಪರಿಶೀಲಿಸಿ. ಅವರು ಎಲ್ಲಾ ಅಂಶಗಳನ್ನು ಪೂರೈಸದಿದ್ದರೆ, ಫಲಿತಾಂಶವನ್ನು ಪರಿಷ್ಕರಿಸಲು ಕೆಳಗಿನ ಜಾಗವನ್ನು ಬಳಸಿ.

| **ಮಾದರಿ IFSP ಫಲಿತಾಂಶ** | **ಇದು ಅಗತ್ಯವಿರುವ ಘಟಕಗಳನ್ನು ಹೊಂದಿದೆಯೇ?** | | | | | | |
|---|---|---|---|---|---|---|---|
| | ಅಗತ್ಯ/ಕ್ರಿಯಾತ್ಮಕ | ನಿಜ ಜೀವನದ ಸಂದರ್ಭಗಳು | ಶಿಸ್ತು- ಮುಕ್ತ | ಪಾರಿಭಾಷಿಕ ಪದಮುಕ್ತ | ಧನಾತ್ಮಕ | ಸಕ್ರಿಯ | ಸಂಬಂಧಿಸಿದ ಸಂದರ್ಭಗಳಿಗನುಗುಣವಾಗಿ |
| **ಲಿಲಿ ತನ್ನ ಕುಟುಂಬದೊಂದಿಗೆ ಮೀನು ಹಿಡಿಯಲು ಹೋಗುವಾಗ ತನ್ನದೇ ಗಾಳವನ್ನು ಹಿಡಿದುಕೊಂಡು ಹೋಗುತ್ತಾಳೆ.** | ✓ | ✓ | ✓ | ✓ | ✓ | ✓ | ✓ |
| **ಡೇವಿಡ್ ಹೆಚ್ಚು ಮಾತನಾಡುತ್ತಾನಾದರೂ, ಪದಗಳನ್ನು ಉತ್ತಮವಾಗಿ ಉಚ್ಚರಿಸುತ್ತಾನೆ.** | ✓ | | | ✓ | ✓ | ✓ | |

| | | | | | | | |
|---|---|---|---|---|---|---|---|
| ಪ್ರಸ್ತುತ ಫಲಿತಾಂಶ: | | | | | | | |
| ಪರಿಷ್ಕರಣೆ: | | | | | | | |
| ಪ್ರಸ್ತುತ ಫಲಿತಾಂಶ: | | | | | | | |
| ಪರಿಷ್ಕರಣೆ | | | | | | | |
| ಪ್ರಸ್ತುತ ಫಲಿತಾಂಶ | | | | | | | |
| ಪರಿಷ್ಕರಣೆ | | | | | | | |
| ಪ್ರಸ್ತುತ ಫಲಿತಾಂಶ | | | | | | | |
| ಪರಿಷ್ಕರಣೆ | | | | | | | |

ಕುಟುಂಬಗಳು ತಮ್ಮಲ್ಲಿ ಮತ್ತು ತಮ್ಮ ಮಕ್ಕಳಲ್ಲಿ ಕಾಣಬಯಸುವ ಬದಲಾವಣೆಗಳನ್ನು ಪ್ರತಿಬಿಂಬಿಸಬೇಕು ಮತ್ತು ಅದು ಕುಟುಂಬದ ಆದ್ಯತೆಗಳು ಮತ್ತು ಮಗುವಿನ ಬೆಳವಣಿಗೆಗೆ ಅಗತ್ಯವಿರುವುದನ್ನು ಆಧರಿಸಿರಬೇಕು.

| **ಫಲಿತಾಂಶ # 1** | **ಆರಂಭಿಕ ದಿನಾಂಕ**<br>**ನಿಗದಿತ ದಿನಾಂಕ** |
|---|---|
| ನಿಮ್ಮ ಮಗು/ಕುಟುಂಬ ಹೇಗಿರಬೇಕು ಅಥವಾ ಹೇಗಾಗಬೇಕು ಎಂದು ನಿಮ್ಮ ಕುಟುಂಬವು ಬಯಸುತ್ತದೆ? (ಫಲಿತಾಂಶವು ಕ್ರಿಯಾತ್ಮಕವಾಗಿರಬೇಕು, ದೈನಂದಿನ ನಿಯತಕಾರ್ಯ ಮತ್ತು ಚಟುವಟಿಕೆಗಳ ಸಂದರ್ಭದಲ್ಲಿ ಅದು ತರುವ ಬದಲಾವಣೆಯು ಎದ್ದು ಕಾಣುವಂತೆ ಇರಬೇಕು,<br><br>ಒಟ್ಟಿಗೆ ಆಡುತ್ತಿರುವಾಗ ಮುಖಾಮುಖಿಯಾಗುವ ಸಂದರ್ಭದಲ್ಲಿ ನೆಲ್ಲಿ ಮೇರಿಯನ್ನು ವೀಕ್ಷಿಸುತ್ತಿರುತ್ತಾಳೆ | |
| ಈ ಫಲಿತಾಂಶಕ್ಕೆ ಸಂಬಂಧಿಸಿದಂತೆ ಈಗ ಏನು ಮಾಡಲಾಗುತ್ತಿದೆ? ಈ ಫಲಿತಾಂಶವನ್ನು ಸಾಧಿಸಲು ನಿಮ್ಮ ಕುಟುಂಬವು ಯಾವ ರೀತಿ ಕಾರ್ಯ ಪ್ರವೃತ್ತವಾಗಿದೆ? (ಅಪೇಕ್ಷಿತ ಬದಲಾವಣೆ/ಫಲಿತಾಂಶಕ್ಕೆ ಸಂಬಂಧಿಸಿದಂತೆ ನಿಮ್ಮ ಮಗು ಮತ್ತು/ಅಥವಾ ಕುಟುಂಬದ ಕಾರ್ಯನಿರ್ವಹಣೆಯನ್ನು ವಿವರಿಸಿ.)<br><br>ನೆಲ್ಲಿ ತನ್ನ ಹೆಸರನ್ನು ಕರೆದರೆ ತಿರುಗಿ ನೋಡುತ್ತಾಳೆ ನಂತರ ಅವಳು ತಾನು ಆಡುತ್ತಿರುವ ಆಟಿಕೆಯೆಡೆಗೆ ತನ್ನ ಗಮನವನ್ನು ಹರಿಸುತ್ತಾಳೆ. ಮೇರಿ ನೆಲ್ಲಿಯೊಂದಿಗೆ ಆಟವಾಡುವಾಗ, ಅವಳನ್ನು ಎತ್ತಿಕೊಂಡು ಅವಳ ಕಣ್ಣುಗಳನ್ನೇ ನೇರವಾಗಿ ದಿಟ್ಟಿಸುವ ಮೂಲಕ ಅವಳ ಗಮನವನ್ನು ಸೆಳೆದು ಅವಳೊಂದಿಗೆ ಮಾತನಾಡಲು ಪ್ರಯತ್ನಿಸುತ್ತಾರೆ ಆದರೆ ಆ ಸಂಭಾಷಣೆ ಚುರುಕಾಗಿ ಮುಗಿಯುತ್ತದೆ. ಅವರಿಬ್ಬರು ಪೀಕ್-ಎ-ಬೂ ಆಡುತ್ತಿರುವಾಗ (ಕೈಯಲ್ಲಿ ಮುಖ ಮುಚ್ಚಿಕೊಂಡು ಕೋಕಿ ಎನ್ನುತ್ತಾ ನಂತರ ಕೈ ತೆಗೆಯುತ್ತಾ ಮಕ್ಕಳಿಗೆ ಮುಖ ತೋರಿಸುತ್ತಾ ಮಕ್ಕಳೊಂದಿಗೆ ಆಡುವ ಆಟ) ಮೇರಿಯ ಮುಖವು ಮರೆಯಾದರೆ, ನೆಲ್ಲಿ ಮೇರಿಯ ಮುಖವು ಮತ್ತೆ ಕಾಣಿಸಿಕೊಳ್ಳುವವರೆಗೆ ಕಾಯುವುದಿಲ್ಲ, ಆಕೆ ಮುಖವನ್ನು ಮುಚ್ಚಿದ ಮರುಕ್ಷಣದಲ್ಲಿ ನೆಲ್ಲಿ ಆಟದಲ್ಲಿ  ಆಸಕ್ತಿಯನ್ನು ಕಳೆದುಕೊಳ್ಳುತ್ತಾಳೆ. | |
| ಈ ಫಲಿತಾಂಶವನ್ನು ಸಾಧಿಸಲು ನಿಮ್ಮ ಕುಟುಂಬ ಮತ್ತು ತಂಡವು ಯಾವ ರೀತಿಯಲ್ಲಿ ಕೆಲಸ ಮಾಡುತ್ತದೆ? ಇದಕ್ಕೆ ಯಾರು ಸಹಾಯ ಮಾಡುತ್ತಾರೆ ಮತ್ತು ಅವರು ಯಾವ ರೀತಿಯಲ್ಲಿ  ಸಹಾಯ ಮಾಡುತ್ತಾರೆ? (ಈ ಫಲಿತಾಂಶಗಳನ್ನು ಸಾಧಿಸಲು ನಿಮ್ಮ ದೈನಂದಿನ ಚಟುವಟಿಕೆಗಳು ಮತ್ತು ದಿನಚರಿಗಳಲ್ಲಿ ನಿಮ್ಮ ಮಗು ಮತ್ತು ಕುಟುಂಬವನ್ನು ಬೆಂಬಲಿಸಲು ಬಳಸಲಾಗುವ ವಿಧಾನಗಳು ಮತ್ತು ತಂತ್ರಗಳನ್ನು ವಿವರಿಸಿ. ಕುಟುಂಬದ ಸದಸ್ಯರು, ಸ್ನೇಹಿತರು, ನೆರೆಹೊರೆಯವರು, ಚರ್ಚ್ ಸೇರಿದಂತೆ ಆರಂಭಿಕ ಮಧ್ಯಪ್ರವೇಶದ ಮೂಲಕ ಒದಗಿಬರುವ ಸೇವೆಗಳು ಮತ್ತು ಅನೌಪಚಾರಿಕ ಬೆಂಬಲಗಳು, ಅಥವಾ ಇತರ ಸಮುದಾಯ ಸಂಸ್ಥೆಗಳು, ವಿಶೇಷ ಆರೋಗ್ಯ ಕಾರ್ಯಕ್ರಮಗಳು, ಪೋಷಕ ಶಿಕ್ಷಣ ಕಾರ್ಯಕ್ರಮಗಳನ್ನು ಒಳಗೊಂಡಂತೆ ಯಾರು ಏನು ಮಾಡುತ್ತಾರೆ ಎಂಬುದನ್ನು ಪಟ್ಟಿ ಮಾಡಿ..)<br><br>ವಿಶೇಷ ಶಿಕ್ಷಣತಜ್ಞರು ನೇರಾನೇರ ಕಣ್ಣನ್ನು ದಿಟ್ಟಿಸುವ ತಂತ್ರಗಳನ್ನು ಹಂಚಿಕೊಳ್ಳುತ್ತಾರೆ, ಉದಾಹರಣೆಗೆ ಹೆಚ್ಚಿನ ಪರಿಣಾಮವನ್ನು ಬಳಸುವುದು, ತಾಯಿಯ ಕಣ್ಣಿನ ಮಟ್ಟಕ್ಕೆ ಮಕ್ಕಳ  ನೆಚ್ಚಿನ ಆಟಿಕೆ ಇಟ್ಟುಕೊಳ್ಳುವುದು ಮತ್ತು ಇತರ DIR ಫ್ಲೋರ್ಟೈಮ್ ತಂತ್ರಗಳನ್ನು ಬಳಸಬೇಕು. ಈ ಸೇವೆಯ ಸಂಯೋಜಕರು ನೆಲ್ಲಿಯ ಶ್ರವಣ ದೋಷಗಳ ಬಗ್ಗೆ ಇನ್ನಷ್ಟು ತಿಳಿದುಕೊಳ್ಳಲು ಶ್ರವಣ ತಪಾಸಣೆಗೆ ವ್ಯವಸ್ಥೆ ಮಾಡುತ್ತಾರೆ. | |
| *ನಾವು ಪ್ರಗತಿಯನ್ನು ಸಾಧಿಸಿದ್ದೇವೆ ಅಥವಾ ಪ್ರಸ್ತುತ ನೀಡಲಾಗುತ್ತಿರುವ ಫಲಿತಾಂಶಗಳು ಅಥವಾ ಸೇವೆಗಳಿಗೆ ಪರಿಷ್ಕರಣೆಗಳ ಅಗತ್ಯವಿದೆ ಎಂಬುದು ನಮ್ಮ ಅರಿವಿಗೆ ಹೇಗೆ ಬರುತ್ತದೆ? (ಯಾವ ಮಾನದಂಡಗಳು [ಅಂದರೆ, ಪ್ರಗತಿ ಹೊಂದುತ್ತಿದೆ ಎಂದು ತೋರಿಸುವ ಗಮನಿಸಬಹುದಾದ ಕ್ರಿಯೆ ಅಥವಾ ನಡವಳಿಕೆ], ಕಾರ್ಯವಿಧಾನಗಳು [ಅಂದರೆ, ವೀಕ್ಷಣೆ, ವರದಿ, ಚಾರ್ಟ್] ಮತ್ತು ವಾಸ್ತವಿಕ ಟೈಮ್‌ಲೈನ್‌ಗಳನ್ನು/ಕಾಲಾವಧಿ ಬಳಸಲಾಗುತ್ತದೆಯೇ?)*<br><br>• *ವಾರಕ್ಕೊಮ್ಮೆ ಮನೆ ಭೇಟಿಯ ಸಮಯದಲ್ಲಿ ಪರೀಕ್ಷಿಸಿದಾಗ ನೆಲ್ಲಿಗೆ 5 ರಲ್ಲಿ 4 ಬಾರಿ ಕಣ್ಣಿನ ಸಂಪರ್ಕ ಸಾಧಿಸಲು ಸಾಧ್ಯವಾಗಿದೆ .*<br>• *4ಬಾರಿ ಮನೆ ಭೇಟಿಯ ಅವಧಿಯಲ್ಲಿ ಸತತವಾಗಿ ಗಮನಿಸಿದಂತೆ ಆಟದ ಸಮಯದಲ್ಲಿ 5 ನಿಮಿಷಗಳ ಕಾಲ ನೆಲ್ಲಿ* | |

| |
|---|
| *ಮೇರಿಯೊಂದಿಗೆ ಆಟವಾಡುವುದರಲ್ಲಿ ತೊಡಗಿಕೊಂಡಿರುತ್ತಾಳೆ.*<br>• *ನೆಲ್ಲಿಯೊಂದಿಗೆ ಕಣ್ಣಿನ ಸಂಪರ್ಕವನ್ನು ಸಾಧಿಸಲು ಮತ್ತು ನಿರ್ವಹಿಸಲು 3 ಹೊಸ ತಂತ್ರಗಳನ್ನು ಕಲಿತಿದ್ದೇನೆ ಎಂದು ಮೇರಿ ಹೇಳುತ್ತಾರೆ.*<br>• |
| **ಹೇಗೆ ಮಾಡಲಾಗಿದೆ? (ಪ್ರಗತಿ ವರದಿಯ ವಿಮರ್ಶೆ/ಯಶಸ್ಸಿಗೆ ನಿಗದಿಪಡಿಸಲಾದ ಮಾನದಂಡದ ವಿಮರ್ಶೆ)**<br>**ದಿನಾಂಕ:**<br><br>**ವಿವರಣೆಗಳು/ಟಿಪ್ಪಣಿಗಳು:** |